॥ श्रीः ॥

ಶ್ರೀರಾಮಧನ್ವಂತರೀ ವಿಜಯತೇ
ಶ್ರೀಗುರುರಾಜೋ ವಿಜಯತೇ

# ಸುಖ

( ಸುಖಕ್ಕೆ ಸನಾತನಧರ್ಮ ಸಹಕಾರಿಯೋ, ವಿರೋಧಿಯೋ)

ಗ್ರಂಥಕರ್ತರು :
ಶ್ರೀ 108 ಶ್ರೀ ದೇವೇಂದ್ರತೀರ್ಥರು
ಮೈಸೂರು.

ಶ್ರೀ ಮಧ್ವಾಂತರ್ಗತ ಶ್ರೀರಾಮಧನ್ವಂತರೀ ವಿಜಯತೇ

ಶ್ರೀಮಧ್ವರಾಜೋ ವಿಜಯತೇ

ಶ್ರೀ ವಾದಿರಾಜೋ ವಿಜಯತೇ

ಶ್ರೀವ್ಯಾಸರಾಜೋ ವಿಜಯತೇ

ಶ್ರೀ ದೇವೇಂದ್ರತೀರ್ಥಗುರುಭ್ಯೋ ನಮಃ

## ಮುನ್ನುಡಿ

ಜೀವರ ಸುಖಪ್ರಾಪ್ತಿಗೂ ದುಃಖನಿವೃತ್ತಿಗೂ ಸನಾತನಧರ್ಮ ಅತ್ಯಂತ ಸಹಕಾರಿಯೇ ಆಗಿದ್ದರೂ. ಈಗಿನ ಕಾಲದಲ್ಲಿ ಕೆಲವರು ಭ್ರಾಂತರಾಗಿ ಅದು ಸುಖಕ್ಕೆ ಕಾರಣವಲ್ಲವೆಂದೂ ದುಃಖಕ್ಕೇ ಕಾರಣವಾದದ್ದೆಂದು ತಾವು ಭಾವಿಸುವುದಿಲ್ಲದೇ ಇತರರ ಬುದ್ಧಿಯ ಭೇದವನ್ನೂ ಮಾಡುತ್ತಿದ್ದಾರೆ. ಸರಿಯಾದ ವಿಷಯ ತಿಳಿದವರು ಅನೇಕರಿದ್ದಾಗ್ಯೂ ಈ ವಿರುದ್ಧ ಭಾವನೆಯನ್ನು ಅಳಿಸುವುದಕ್ಕೆ ಪ್ರಯತ್ನಪಡುತ್ತಿಲ್ಲ. ಕಾರಣ ತಿಳಿಯಲಿಲ್ಲ ಹೀಗಿದ್ದರೂ ನಾವು ನಮಗೆ ತಿಳಿದಮಟ್ಟಿಗೆ ಪರೋಪಕಾರಬುದ್ಧಿಯಿಂದ ಸನಾತನಧರ್ಮವು ಮಹಾಸುಖಪ್ರಾಪ್ತಿಗೂ ಸಮಸ್ತದುಃಖ ನಿವೃತ್ತಿಗೂ ಕಾರಣವಾದದ್ದೆಂದು ಸಜ್ಜನರಿಗೆ ತಿಳಿಸಲು ಈ ಗ್ರಂಥರಚನೆಯನ್ನು ಕೈಗೊಂಡಿದ್ದೇವೆ. ಯಾರಿಗೂ ನೀವು ಮಾಡಿ ಎಂದು ಹೇಳಲು ಹೊರಟಿಲ್ಲ. ಹಿಂದೆ ಮಹಾಭಾರತ ಯುದ್ಧದ ಸಂದರ್ಭದಲ್ಲಿ ಅರ್ಜುನನು ''ಯುದ್ಧವು ಪಾಪಕ್ಕೂ ದುಃಖಕ್ಕೂ ಕಾರಣವಾದದ್ದು'' ಎಂದು ಶಂಕಿಸಿದಾಗ, ಶ್ರೀಕೃಷ್ಣಪರಮಾತ್ಮನು ಧರ್ಮದ ಯುದ್ಧವು ಕ್ಷತ್ರಿಯರಿಗೆ ಪೂರ್ವ ಪುಣ್ಯದಿಂದಲೇ ದೊರಕುವದು. ಅದು ಮುಂದಿನ ಮಹಾಪುಣ್ಯಕ್ಕೆ ಸಾಧನವಾದದ್ದು. ಆದ್ದರಿಂದಲೇ ಮಹಾಸುಖಕ್ಕೂ ಕಾರಣವೇ ಆದದ್ದೆಂದು ತಿಳಿಸಿದ್ದಾನೆ. ಅರ್ಜುನನಿಗೆ ಯುದ್ಧ ಮಾಡು ಎಂದು ಬಲಾತ್ಕಾರ ಮಾಡಲಿಲ್ಲ. ಮನಸ್ಸಿಗೆ ಬಂದಂತೆಯೇ ಮಾಡು ಎಂದು ಹೇಳಿದನು. ಅಂದ

ಮೇಲೆ ಯಾರೂ ಯಾರಿಗೂ ಬಲಾತ್ಕಾರ ಮಾಡುವಂತಿಲ್ಲ. ಆದ್ದರಿಂದ ನಾವು ಸನಾತನಧರ್ಮ ಮಹಾಸುಖಕ್ಕೆ ಕಾರಣವಾದದ್ದೆಂದು ಹೇಳುವುದಕ್ಕೆ ಮಾತ್ರ ಹೊರಟಿದ್ದೇವೆ. ನಮ್ಮ ಮಾತಿನಲ್ಲಿ ಏನಾದರೂ ದೋಷ ಕಂಡುಬಂದರೆ, ವಿಶೇಷಾಭಿಜ್ಞರು ತಿಳಿಸಿದರೆ ನಮಗೂ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಎಂಬ ಸದುದ್ದೇಶದಿಂದ ಈ ಗ್ರಂಥವನ್ನು ಪ್ರಕಟಿಸಲಾಗಿದೆ.

ಶ್ರೀ 108 ಶ್ರೀ ದೇವೇಂದ್ರತೀರ್ಥರು

ಮೈಸೂರು.

# ಸುಖ

## 1. ಸುಖದ ಪ್ರಶಂಸಾ ಮತ್ತು ಆದರ ಪ್ರಭೇದಗಳು

ಲೋಕದಲ್ಲಿ ಜನರು ಬಯಸುವ ಧನ, ಧಾನ್ಯ, ಮನೆ, ಮಠ, ವಿದ್ಯೆ, ಅಧಿಕಾರ, ಕೀರ್ತಿ, ಮರ್ಯಾದೆ, ಪುಣ್ಯ, ಬಂಧುವರ್ಗ ಇವೇ ಮೊದಲಾದ ನಾನಾ ವಿಷಯಗಳೆಲ್ಲವೂ ತಮ್ಮ ಸುಖಕ್ಕಾಗಿಯೇ ಅಥವಾ ದುಃಖ ನಿವೃತ್ತಿಗಾಗಿಯೋ ಇರುತ್ತದೆ. ಆ ಸುಖವು ಮತ್ತೊಂದಕ್ಕೋಸ್ಕರವಲ್ಲ . ಅದು ಸ್ವತಃ ಸುಂದರವಾದದ್ದು ಅದನ್ನು ಪುರುಷರು (ಜೀವರು ) ಬಯಸುವದರಿಂದ ಅದೇ ಮುಖ್ಯವಾದ ಪುರುಷಾರ್ಥವೆನಿಸುವುದು.

ಲೋಕ ಪ್ರಸಿದ್ಧವಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳು ಪುರುಷರಿಂದ ಬಯಸಲ್ಪಟ್ಟು ಸುಖಕ್ಕೆ ಕಾರಣವಾಗದಲೇ ಪುರುಷಾರ್ಥಗಳೆಂಬ ಹೆಸರನ್ನು ಹೊಂದುವವು. ಇಂತಹ ಮುಖ್ಯ ಪುರುಷಾರ್ಥಶಬ್ದವಾಚ್ಯವಾದ ಸುಖದಲ್ಲಿ 1)ತಾತ್ಕಾಲಿಕ ಸುಖ 2)ದೀರ್ಘಕಾಲದ ಸುಖ 3)ಪರ ಲೋಕದ ಸುಖ 4) ಶಾಶ್ವತ ಸುಖ ಎಂಬುದಾಗಿ ನಾಲ್ಕು ವಿಭಾಗಗಳಿವೆ. ಅವಿವೇಕಿಗಳಾದ ಮಕ್ಕಳೇ ಮೊದಲಾದವರು ತತ್ಕಾಲಸುಖವನ್ನು ಮಾತ್ರ ಬಯಸುತ್ತಾರೆ. ವಿವೇಕಿಗಳು ತತ್ಕಾಲಸುಖವನ್ನು ಲೆಕ್ಕಿಸದೇ ದೀರ್ಘಕಾಲದ ಸುಖಕ್ಕೆ ಪ್ರಯತ್ನ ಮಾಡುತ್ತಾರೆ. ಆಸ್ತಿಕರು ಈ ಲೋಕದ ದೀರ್ಘಕಾಲದ ಸುಖವನ್ನು ಲೆಕ್ಕಿಸದೇ ಪರಲೋಕದ ಸುಖ ಹೊಂದುವುದಕ್ಕೆ ಪ್ರಯತ್ನ ಪಡುತ್ತಾರೆ. ಪರಮಾಸ್ತಿಕರು ಅದನ್ನೂ ಲೆಕ್ಕಿಸದೇ ಶಾಶ್ವತಸುಖಕ್ಕೆ ಮಹಾಪ್ರಯತ್ನ ಮಾಡುತ್ತಾರೆ .

ಸುಖವನ್ನು ಬಯಸುವವರು ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ವಿಷಯವೇನೆಂದರೆ, ನಾವು ಬಯಸುವ ಸ್ರಕ್ (ಹೂವಿನಹಾರ) ಚಂದನ, ವನಿತಾದಿಗಳು ಸುಖಸಾಧನಗಳೇ ವಿನಹ ಸುಖಸ್ವರೂಪವಾದದ್ದಲ್ಲ . ಆದ್ದರಿಂದಲೇ, ನಮಗೆ ಬೇಕೆಂದೆನಿಸಿರುವಾಗ ಆ ವಸ್ತುಗಳು ಸಮೀಪಕ್ಕೆ ಬಂದಾಗ ಸುಖವಾಗುತ್ತದೆಯೇ ವಿನಹ, ಬೇಡವೆಂದೆನಿಸಿರುವಾಗ ಅವುಗಳು ಸಮೀಪಕ್ಕೆ ಬಂದರೆ ಸುಖವಾಗದೇ ದುಃಖವೇ ಆಗುವ ಸಂದರ್ಭವೂ ಉಂಟು. ‘‘ವಿಚಾರ ಮಾಡಿದರೆ ಸುಖ ಎಂಬುದು

ಶರೀರದ ಹೊರಗಿರುವ ಪದಾರ್ಥವಲ್ಲ, ಜೀವನ(soul) ಅಂತಃಕರಣದ ಧರ್ಮವಾಗಿದೆ ''. ಆದ್ದರಿಂದ ಸುಖವನ್ನು ಬಯಸುವವರು ತಮ್ಮ ಅಂತರಂಗದ ಕಡೆ ದೃಷ್ಟಿಕೊಡದೇ ಶರೀರದ ಹೊರಗಿರುವ ಪದಾರ್ಥಗಳ ಸಂಗ್ರಹಮಾಡುವುದರಲ್ಲಿ ಮಾತ್ರ ದೃಷ್ಟಿ ಕೊಟ್ಟರೆ, ಉತ್ತರದಕ್ಕಿಗೆ ಹೋಗಬೇಕೆಂದು ಅಪೇಕ್ಷೆ ಉಳ್ಳವರು ದಕ್ಷಿಣದಕ್ಕಿಗೆ ಹೋಗುವ ರೈಲನ್ನು ಹತ್ತಿದವರಿಗೆ ಸಮಾನರಾಗುವರು. ಸುಖವೆಂದರೆ ನಮಗೆ ಅನುಕೂಲವೆಂದು ತಿಳಿದು ಕೊಳ್ಳೋಣ, ಇದಕ್ಕೆ ವಿರುದ್ಧವಾಗಿ ಪ್ರತಿಕೂಲವೆಂದು ತಿಳಿಯುವುದೇ ದುಖಃವೆನಿಸುತ್ತದೆ. ಈ ಸುಖದುಃಖಗಳು ನಮ್ಮ ಅಧೀನವಾದದ್ದಲ್ಲ, ನಮ್ಮ ಅಧೀನವಾಗಿದ್ದರೆ ಯಾರೂ ದುಃಖಪಡುತ್ತಿರಲಿಲ್ಲ, ಯಾವಾಗಲೂ ಸುಖವನ್ನೇ ಪಡುತ್ತಿದ್ದರು. ಹಾಗೆ ನಾವು ಯಾವಾಗಲೂ ಸುಖಪಡುತ್ತಿಲ್ಲವಾದ್ದರಿಂದ ಶಾಸ್ತ್ರಗಳಲ್ಲಿ ಉಕ್ತವಾದಂತೆ ನಾವು ಅನುಭವಿಸುವ ಸುಖ ದುಃಖಗಳು ದೈವಧೀನವಾದದ್ದಂದೇ ತಿಳಿಯಬೇಕು. ನಮ್ಮ ಮನೋಭಾವನೆಯಿಂದಲೇ ಸುಖದುಃಖಗಳಾಗುತ್ತವೆ ಎಂದು ಕೆಲವರುತಿಳಿಯುತ್ತಾರೆ. ನಾವೇ ಸ್ವತಂತ್ರರಾಗಿದ್ದರೆ ಆ ಭಾವನೆಯನ್ನು ನಮ್ಮ ಮನಸ್ಸಿಗೆ ಬಂದಂತೆ ಮಾಡಿಕೊಳ್ಳಬಹುದಷ್ಟೇ ? ನಾವೇ ನಮ್ಮ ನಾಲಿಗೆಯನ್ನೋ, ತುಟಿಯನ್ನೋ ಕಚ್ಚಿಕೊಂಡಾಗ ಆಗುವ ದುಃಖಾನುಭವವು ನಮ್ಮ ಅಧೀನವಾದುದಲ್ಲವೆಂದೇ ತಿಳಿದುಬರುತ್ತದೆ. ಇದರಂತೆ ಊಟವೇ ಮೊದಲಾದ ಸುಖಸಾಮಗ್ರಿಗಳು ಇಲ್ಲದೇ ಇರುವಾಗಲೂ ಮನಷ್ಯನ ಮನಸ್ಸಿಗೆ ಒಂದು ಕಾಲದಲ್ಲಿ ಉಲ್ಲಾಸದಿದ ವಿಚಿತ್ರವಾದ ಸುಖವು ಕಂಡುಬರುತ್ತದೆ. ಆ ಪದಾರ್ಥಗಳು ಇದ್ದರೂ ಒಂದು ಕಾಲದಲ್ಲಿ ಸುಖ  ದೊರೆಯುವುದಿಲ್ಲ, ಆದ್ದರಿಂದ ಆ ಪದಾರ್ಥಗಳಿಂದಲೇ ಸುಖವೆಂದು ಅತಿಯಾಗಿ ನಂಬಬಾರದು. ಇವುಗಳನ್ನು ನೆನೆಸಿಕೊಂಡಾಗ ಸುಖದುಃಖಗಳು ದೈವಾಧೀನವಾದವುಗಳೆಂದೇ ತಿಳಿಯಬೇಕಾಗಿದೆ. ಆದ್ದರಿಂದ ದುಃಖದ ಪರಿಹಾರವನ್ನು , ಈ ಲೋಕದ ಅಲ್ಪಸುಖವನ್ನಾಗಲೀ, ಶಾಶ್ವತಸುಖರೂಪವಾದ ಮೋಕ್ಷವನ್ನಾಗಲೀ ಬಯಸುವವರು, ದೇವರ ಅನುಗ್ರಹವನ್ನೇ ಸಂಪಾದನೆ ಮಾಡಬೇಕೆಂದು ಜೀವರ ದುಃಖನಿವೃತ್ತಿಯ ಉಪಾಯವನ್ನು ಹೇಳುವುದಕ್ಕೇ ಹೊರಟಿರುವ ವೇದ ಶಾಸ್ತ್ರಾದಿಗಳು ತಿಳಿಸುತ್ತಿವೆ.

## 2) ಪ್ರಮಾಣಗಳ ವಿಮರ್ಶೆ

ಪರಲೋಕಗಳು, ಅದಕ್ಕೆ ಕಾರಣವಾದ ಪುಣ್ಯಪಾಪಗಳು, ಅದನ್ನು ಅನುಭವಿಸುವ ದೇಹಾತಿರಿಕ್ತ ಆತ್ಮ (ಜೀವರು) ಮೋಕ್ಷ, ಎಲ್ಲಾ ಪ್ರಮಂಚಕ್ಕೂ ನಿಯಾಮಕನಾದ ದೇವರು ಇವೆಲ್ಲಾ ಕಣ್ಣಿಗೆ ಕಾಣಿಸುವದಿಲ್ಲವಾದ್ದರಿಂದ ಅವುಗಳನ್ನು ನಂಬಬೇಕಾಗಿಲ್ಲವೆಂದು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ಯಾವ ವಸ್ತುವೇ ಆಗಲಿ ''ಇದೆ'' ಅಥವಾ ''ಇಲ್ಲ'' ಎನ್ನುವದಕ್ಕೆ ಆಧಾರ (Authority) ಗಳು ಇರಬೇಕು. ದೃಷ್ಟಾಂತಕ್ಕೆ ಯಾವ ಇಂದ್ರಿಯಕ್ಕೆ ಯಾವ ವಸ್ತು ವಿಷಯವಾಗುತ್ತದೆಯೋ ಆ ಇಂದ್ರಿಯವೇ ''ಆ ವಸ್ತು'' 'ಇದೆ' ಅಥವಾ 'ಇಲ್ಲ' ಎನ್ನುವುದಕ್ಕೆ ಆಧಾರವಾಗುತ್ತದೆ. ''ಕೊಡ'' ಮೊದಲಾದ ಪದಾರ್ಥಗಳು ಕಣ್ಣಿಗೆ ವಿಷಯವಾದುದರಿಂದ, ಈ ಸ್ಥಳದಲ್ಲಿ 'ಕೊಡ ಇದೆ' ಎನ್ನುವುದಕ್ಕೂ ''ಇಲ್ಲ'' ಎನ್ನುವದಕ್ಕೂ ಕಣ್ಣೇ ಆಧಾರ. ವಸ್ತು ಹೇಗೆ ಇದೆಯೋ ಹಾಗೆಯೇಯಾವುದು ಗ್ರಹಿಸುತ್ತದೆಯೋ ಅದಕ್ಕೆ ಪ್ರಮಾಣವೆಂದು ಹೆಸರು. ಇದರಂತೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳನ್ನು ತಿಳಿಸುವ ಪ್ರಮಾಣಗಳು ಕ್ರಮವಾಗಿ ಶ್ರೋತ್ರ, ತ್ವಕ್, ಚಕ್ಷುಷ್, ರಸನ, ಘ್ರಾಣೇಂದ್ರಿಯಗಳು ಇವೇ 'ಪಂಚೇಂದ್ರಿಯ'ಗಳೆಂದು ಲೋಕಪ್ರಸಿದ್ಧವಾದವುಗಳು. ಇವುಗಳನ್ನೇ ಶಾಸ್ತ್ರದಲ್ಲಿ ಪ್ರತ್ಯಕ್ಷಪ್ರಮಾಣಗಳ ಪ್ರಭೇದಗಳೆಂದು ಕರೆಯುತ್ತಾರೆ. ಇಂದ್ರಿಯಗಳಿಗೆ ಗೋಚರವಾದ ವಿಷಯಗಳನ್ನು ತಿಳಿಸಿಕೊಡುವುದು ಮನಸ್ಸು. ಇದು ಶರೀರದ ಒಳಗೆ ಇರುವದರಿಂದ ಅಂತಃಕರಣವೆಂಬ ಹೆಸರುನ್ನು ಹೊಂದುತ್ತದೆ. ಚಕ್ಷುರಾದಿಗಳಿಗೆ ಬಾಹ್ಯಕರಣಗಳೆಂದು ಹೆಸರು.ಇಂದ್ರಿಯಗಳಿಗೆ ವಿಷಯವಾಗುವ ಪದಾರ್ಥಗಳನ್ನು ನಂಬದವರು ಲೋಕದಲ್ಲಿ ಬದುಕುವುದೇ ಕಷ್ಟವಾಗುತ್ತದೆ. ಈ ವಿಷಯ ಎಲ್ಲರಿಗೂ ತಿಳಿದಿದ್ದೇ ಆಗಿದೆ. ನಮ್ಮ ಜೀವನವು ಸುಖಕರವಾಗಬೇಕಾದರೆ ಪೂರ್ವೋಕ್ತವಾದ ಎಲ್ಲ ಇಂದ್ರಿಯಗಳಿಗೆ ವಿಷಯವಾಗುವ ಪದಾರ್ಥಗಳನ್ನು ನಂಬಬೇಕು. ಚಕ್ಷುರಿಂದ್ರಿಯಕ್ಕೆ ವಿಷಯವಾಗುವ ಪದಾರ್ಥವನ್ನು ನಂಬುವವರು ಇತರ ಇಂದ್ರಿಯಗಳ ವಿಷಯಗಳನ್ನು ಅನುಭವಿಸುವ ಸುಖವನ್ನು ಕಳೆದುಕೊಳ್ಳುವ ಸಂಗರ್ಭ ಬರುತ್ತಿರುವಾಗ; ಆ ಚಕ್ಷುರಿಂದ್ರಿಯಕ್ಕೆ ವಿಷಯವಾದದ್ದೂ ಸುಳ್ಳೆಂಬುವವರು ಎಲ್ಲಾ ತರಹದ ಸುಖಗಳನ್ನೂ ಕಳೆದುಕೊಂಡು

ಮಹಾದುಃಖಕ್ಕೆ ಗುರಿಯಾಗುವುದರಲ್ಲಿ ಸಂಶಯವಿಲ್ಲ.

''ನಾನು ಇದ್ದೇನೆ ; ನಾನು ಸುಖ ಅಥವಾ ದುಃಖಪಡುತ್ತಿದ್ದೇನೆ; ನನ್ನ ಮನಸ್ಸು ಸರಿಯಿಲ್ಲ; ಅದು ಎಲ್ಲೋ ಹೋಗಿದೆ; ಇವೇ ಮುಂತಾದ ವಿಷಯಗಳು ಅನುಭವವೇದ್ಯವಾಗಿವೆ. ಈ ಅನುಭವವು ಚಕ್ಷುರಾದಿ ಇಂದ್ರಿಯಗಳಿಂದ ರಹಿತರಾದವರಿಗೂ ಬರುತ್ತಿರುವುದರಿಂದ, ಈ ಅನುಭವ ಆ ಇಂದ್ರಿಯಗಳಿಗೆ ವಿಷಯವಾದದ್ದಲ್ಲ. ಕಣ್ಣು ಮೊದಲಾದ ಯಾವ ಇಂದ್ರಿಯಗಳಿಗೂ ವಿಷಯವಲ್ಲದ ಈ ಜ್ಞಾನವನ್ನು ಗ್ರಹಿಸುವ ಇಂದ್ರಿಯಗಳಿಗೂ ವಿಷಯವಲ್ಲದ ಈ ಜ್ಞಾನವನ್ನು ಗ್ರಹಿಸುವ ಇಂದ್ರಿಯಕ್ಕೆ ''ಸಾಕ್ಷಿ'' ಎಂದು ಹೆಸರು. ಇದೂ ಒಂದು ಪ್ರಮಾಣವಾಗಿ ಪ್ರತ್ಯಕ್ಷದ ಪ್ರಭೇದ ಎನಿಸುವದು.

ಕಣ್ಣು ಮೊದಲಾದ ಗೋಳಕಗಳನ್ನು ನೋಡಬಹುದಾಗಿದ್ದರೂ, ಚಕ್ಷುಸ್ ಮೊದಲಾದ ಕಣ್ಣಿಗೆ ಕಾಣಲಾರವು. ಇವನಿಗೆ ನೋಡುವ ಶಕ್ತಿಯಿರುವುದರಿಂದ ''ಚಕ್ಷುರಿಂದ್ರಿಯವಿದೆ'' ಕೇಳುತ್ತಾ ಇರುವುದರಿಂದ ''ಶ್ರೋತ್ರೇಂದ್ರಿಯವಿದೆ'' ಎಂದು ಊಹಿಸಿ ತಿಳಿಯಬೇಕಾಗಿದೆ. ದೂರದಲ್ಲಿ ಹೊಗೆ ನೋಡಿದಾಗ ಅಗ್ನಿ ಕಣ್ಣಿಗೆ ಕಾಣಿಸದಿದ್ದರೂ, ಅಗ್ನಿ ಇಲ್ಲದೆ ಹೊಗೆ ಇರುವುದಿಲ್ಲವಾದ್ದರಿಂದ ಅಲ್ಲಿ ''ಅಗ್ನಿ ಇದೆ'' ಎಂದು ಊಹಿಸುತ್ತೇವೆ. ಇವುಗಳು ಸುಳ್ಳಲ್ಲ, ಇರುವ ಪದಾರ್ಥಗಳನ್ನು ತಿಳಿಸಿ ಕೊಡುವ ಈ ಊಹೆಗೆ ''ಅನುಮಾನ'' ವೆಂದು ಶಾಸ್ತ್ರದಲ್ಲಿ ಹೇಳುತ್ತಾರೆ. ಇದು ಎರಡನೇ ಪ್ರಮಾಣ. ದೇಶಾಂತರ, ಕಾಲಾಂತರ ಪದಾರ್ಥಗಳನ್ನು ಮತ್ತೊಬ್ಬರು ಮಾತಿನಿಂದಲೋ ಅವರ ಅಭಿಪ್ರಾಯವನ್ನು ಸೂಚಿಸುವ ಗ್ರಂಥಗಳಿಂದಲೋ ತಿಳಿಯುತ್ತೇವೆ. ಇದಕ್ಕೆ ''ಆಗಮ'' ವೆಂದು ಹೆಸರು ಇದು ಮೂರನೇ ಪ್ರಮಾಣ.

ಲೋಕದಲ್ಲಿ''ಧರ್ಮ'', ''ಅದರ್ಮ'',''ದೇವರು''ಮುಂತಾದಪದಗಳಿವೆ. ಆ ಪದಗಳಿಂದ ಕರೆಸಿಕೊಳ್ಳುವ ವಸ್ತುಗಳು ನಮಗೆ ಗೊತ್ತಿಲ್ಲದಿದ್ದರೂ, ಇರಲೇಬೇಕು. ಇದರಂತೆ ನಮಗೆ ಹೆಸರು ಇದ್ದೇ ಇರುತ್ತದೆ. ಯಾವ ಪದಗಳೂ ನಿರರ್ಥಕಗಳಾಗಿರುವುದಿಲ್ಲ. ಇದನ್ನು ಕಾಳಿದಾಸನು

''ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ

ಜಗತಃ ಪಿತರೌವಂದೇ ಪಾರ್ವತೀಪರಮೇಶ್ವರೌ ॥

ಎಂದು ಹೇಳಿದ್ದಾನೆ. ಪ್ರಪಂಚದಲ್ಲಿ ಯಾವುದು ಎಂದಾದರೂ, ಎಲ್ಲಾದರೂ ಇದ್ದರೂ ಅದು ವಸ್ತು ಎಂಬ ಹೆಸರನ್ನು ಹೊಂದುತ್ತದೆ. ಕ್ರಿಯೆಗಳಿಗೂ ಗುಣಗಳಿಗೂ ವಸ್ತುವಿನಲ್ಲೇ ಅಂತರ್ಭಾವ ಎಂದು ತಿಳಿಯಬೇಕು. ಒಂದು ಪದವು ದೊರಕಿದಾಗ ಅದರಿಂದ ಕರೆಸಿಕೊಳ್ಳುವ ಪದಾರ್ಥ ನಮಗೆ ಪರಿಚಯವಿಲ್ಲದಿದ್ದರೂ ಅದು ತ್ರಿಕಾಲಗಳಲ್ಲಿ ಯಾವಾಗಲಾದರೂ ಇರುವುದೆಂದೇ ಭಾವಿಸಬೇಕು. ಧರ್ಮ, ಅಧರ್ಮ ಮೊದಲಾದ ಅತೀಂದ್ರಿಯ ಪದಾರ್ಥಗಳನ್ನು ತಿಳಿಸಿಕೊಡುವುದು ''ಆಗಮ'' ಯಾರ ಮಾತಿನಿಂದಲೂ ಧರ್ಮಾದಿಗಳನ್ನು ನಿಶ್ಚಯಿಸಲು ಸಾಧ್ಯವಿಲ್ಲವಾದ್ದರಿಂದ ಅದನ್ನು ತಿಳಿಸಿಕೊಡುವ ಯಾರು ಮಾಡಿದರೆಂಬ ಪ್ರಸಿದ್ಧಿಯಿಲ್ಲದಿದ್ದರೂ ಒಬ್ಬರಿಂದ ಮತ್ತೊಬ್ಬರು ಕೇಳಿಕೊಂಡುಬರುತ್ತಿರುವದಿಂದಲೇ ''ಶ್ರುತಿ'' ಎಂಬ ಹೆಸರುಳ್ಳ, ಅನುಭವಕ್ಕೆ ಬರುವ ವಿಷಯವನ್ನೂ ತಿಳಿಸಿಕೊಡುವ ವೇದಗಳು, ಅಪೌರುಷೇಯಾಗಮಗಳೆಂದು ಕರೆಸಿಕೊಳ್ಳುತ್ತಾ ಮೂರನೇ ಪ್ರಮಾಣವೆನಿಸುತ್ತವೆ.

ಪ್ರತ್ಯಕ್ಷಕ್ಕೆ (ಕಣ್ಣು ಮೊದಲಾದ ಇಂದ್ರಿಯಗಳಿಗೆ ) ವಿಷಯವಾಗುವ ಪದಾರ್ಥಗಳು ಇವೆ ಅಥವಾ ಇಲ್ಲ ಎಂಬುವ ವಿಷಯದಲ್ಲಿ ಇಂದ್ರಿಯಗಳೇ ಪ್ರಮಾಣಗಳೆನಿಸುತ್ತವೆ. 'ಕಣ್ಣು' ಮೊದಲಾದ ಇಂದ್ರಿಯಗಳು ಕಾಮಾಲೆ ಮೊದಲಾದ ದೋಷಗಳಿಂದ ಕೂಡಿರುವಾಗ ವಸ್ತು ಹೇಗೆ ಇದೆಯೋ ಹಾಗೆಯೇ ಜ್ಞಾನವನ್ನು ಹುಟ್ಟಿಸದೇ ವಿಪರೀತಜ್ಞಾನವನ್ನು (ಬೆಳ್ಳಗಿರುವ ಬಟ್ಟೆಯನ್ನು ಹಳದಿ ಬಟ್ಟೆ ಎಂಬ ಜ್ಞಾನವನ್ನು ) ಹುಟ್ಟಿಸುತ್ತವೆ. ಈ ಸಂದರ್ಭದಲ್ಲಿ ಕಣ್ಣು ಪ್ರತ್ಯಕ್ಷಪ್ರಮಾಣವೆನಿಸದೆ ಪ್ರತ್ಯಕ್ಷಾಭಾಸವೆನಿಸಿ ಕೊಳ್ಳುವುದು. ಹಿಂದೆ ಹೇಳಿದ ''ಅನುಮಾನ'' (ಊಹೆ) ವನ್ನು ವಿರುದ್ಧ ವಿಷಯದಲ್ಲೂ ಮಾಡುವದಕ್ಕೆ ಬರುವುದರಿಂದ; ಉದಾಹರಣೆಗೆ ಧೂಳನ್ನು ನೋಡಿ ಹೊಗೆ ಎಂದು ಭ್ರಮಿಸಿ ಅಲ್ಲಿ ಅಗ್ನಿ ಇದೆ ಎಂದು ಊಹಿಸಿದಾಗ ನಮ್ಮ ಊಹೆಯಂತೆ ಅಲ್ಲಿ ಅಗ್ನಿ ಇರುವುದಿಲ್ಲವಾದ್ದರಿಂದ ಆ ಊಹೆಯು '' ಅನುಮಾನಾಭಾಸ '' ವೆನಿಸುವುದು. ಮೋಸಗಾರರ ಮಾತನ್ನು ನಂಬಿ ಇಲ್ಲದೇ ಇರುವ ವಿಷಯವನ್ನು ''ಇದೆ'' ಎಂದು ತಿಳಿಯುವಾಗಲೂ ಇರುವ ವಿಷಯವನ್ನು ಇಲ್ಲ ಎಂದು ತಿಳಿದಾಗಲೂ

ಅವರ ವಾಕ್ಯವು 'ಅಗಮಾಭಾಸ'ವೆನಿಸುತ್ತದೆ. ಅತೀಂದ್ರಿಯವಸ್ತುಗಳನ್ನು ತಿಳಿಸಿಕೊಡುವ ವಿಷಯದಲ್ಲಿ ಅಪೌರುಷೇಯಾಗಮಗಳೇ ಪ್ರಮಾಣಪದವಿಯನ್ನು ಅಲಂಕರಿಸುತ್ತವೆ. ಅಪೌರುಷೇಯಾಗಮಳೆಂದು ಪ್ರಸಿದ್ಧವಾದ ವೇದಗಳು ಯಾರಿಂದಲೂ ರಿಚಿಸಲ್ಪಟ್ಟಿಲ್ಲವಾದ್ದರಿಂದ, ಪುರುಷರ ಸಂಬಂಧದಿಂದ ಬರಬಹುದಾದ ಅಜ್ಞಾನ, ಮೋಸ ಇವುಗಳಿಗೆ ಅವಕಾಶವಿಲ್ಲವಾದ್ದರಿಂದ, ವಸ್ತುಗಳನ್ನು ಯಥಾರ್ಥವಾಗಿ ತಿಳಿಸುತ್ತಾ ನಿಯತಪ್ರಾಮಾಣ್ಯವನ್ನು ಹೊಂದುತ್ತವೆ. ಪ್ರತ್ಯಕ್ಷಕ್ಕೂ ಅಥವಾ ಸದಾಗಮಗಳಿಗೂ ಸಮ್ಮತವಾಗುವ ಪದಾರ್ಥಗಳನ್ನು ಮೊದಲು ಊಹೆಯಿಂದ ತಿಳಿಯುವ ಸಂಧರ್ಭದಲ್ಲೂ, ಪರಸ್ಪರ ಆಗಮಗಳಿಗೆ ವಿರೋಧ ತೋರಿದಾಗ ಉಭಯವಾಕ್ಯಗಳಿಗೆ ಸಮ್ಮತವಾದ ಅರ್ಥವೇನಿರಬೇಕೆಂದು ಊಹಿಸುವಾಗಲೂ, ಅನುಮಾನ ಪ್ರಮಾಣವೆನಿಸುತ್ತದೆ.

ಸಾಕ್ಷಿಯು ಮಾತ್ರ ಯಾವಾಗಲೂ ಇರುವ ವಿಷಯವನ್ನು ಇರುವ ಹಾಗೆಯೇ ಗ್ರಹಿಸುತ್ತದೆ, ಅಂದರೆ ತನಗೆ ವಿಷಯವಾದ ಸುಖವನ್ನು ಸುಖವನ್ನಾಗಿಯೇ, ದುಃಖವನ್ನು ದುಃಖವನ್ನಾಗಿಯೇ ಗ್ರಹಿಸುತ್ತದೆಯೇ ವಿನಹ ವಿಪರೀತವಾಗಿ ಗ್ರಹಿಸುವುದಿಲ್ಲ, ಆದ್ದರಿಂದ ''ಸಾಕ್ಷಿ''ಗೆ ನಿಯತ ಪ್ರಾಮಣ್ಯವನ್ನು ಹೇಳಬೇಕು. ಪ್ರಮಾಣಗಳಿಂದ ಸಿದ್ಧವಾಗುವ ವಿಷಯಗಳನ್ನು ಪರಂಪರಾ ಉಪದೇಶದಿಂದ ತಿಳಿಯುವ ಸಂದರ್ಭದಲ್ಲಿ ಆ ಮಾತುಗಳು 'ಐತಿಹ್ಯ' ಎಂಬ ಹೆಸರನ್ನು ಹೊಂದುತ್ತವೆ. ಪ್ರಮಾಣಸಿದ್ಧವಾದ ವಿಷಯಗಳನ್ನು ತಾವು ಚೆನ್ನಾಗಿ ತಿಳಿದು ಉಪದೇಶ ಮಾಡುವ ಸಾಮರ್ಥ್ಯದಿಂದಲೂ ಕೂಡಿದವರಾಗಿ ಯೋಗ್ಯವಾದ ಅಧಿಕಾರಿಗಳಿಗೆ ಸಂದರ್ಭನುಸಾರ ಹೇಳುವುದಕ್ಕೆ ''ಆಪ್ತಿ'' ಎಂದು ಹೆಸರು . ವಿಶ್ವಾಸದಿಂದ ಹೇಳುವ ವಾಕ್ಯಗಳು ಆಪ್ತವಾಕ್ಯಗಳೆನಿಸುತ್ತವೆ. ವೇದಾರ್ಥ ಹೇಳುವವರ ಅಜ್ಞಾನದಿಂದ ಕೆಲವೊಮ್ಮೆ ಅಪಾರ್ಥ ಆಗುವ ಸಂದರ್ಭವೂ ಉಂಟು. ಶ್ರುತಿ(authorities),ಯುಕ್ತಿ(logic) ಮತ್ತು ಆಪ್ತಿ (words of experienced hand ) ಈ ಮೂರು ಎಲ್ಲಿ ಸೇರುವುದೋ ಆ ವಾಕ್ಯಕ್ಕೆ ಉತ್ತಮಪ್ರಾಮಣ್ಯವನ್ನು ಕೊಡಬೇಕು. ನಾವು ಅನುಭವಿಸುವ ಸುಖ ದುಃಖಾದಿಗಳು

ಚಕ್ಷುರಾದಿಗಳಿಗೆ ವಿಷಯವಾದುದಲ್ಲ. ಆಂತಹ ಅನುಭವಿಸಿದ್ಧವಾದ ವಿಷಯಗಳನ್ನು ತಿಳಿಸಿಕೊಡುವ ಸಾಕ್ಷಿ ಎಂಬುದು ಜೀವನ ಸ್ವರೂಪೇಂದ್ರಿಯವೇ ಆಗಿದೆ. ಅನುಭವವನ್ನು ನಂಬದವರನ್ನು ಕಂಬಕ್ಕೆ ಕಟ್ಟಿ ನಾಲ್ಕು ಏಟನ್ನು ಕೊಟ್ಟು ನಿನಗೆ ದುಃಖಾನುಬವವಾಗುತ್ತಿಲ್ಲ , ಸುಳ್ಳು ಹೇಳುತ್ತಿದ್ದೀ ಎಂದು ಹೇಳಿದಾಗ ಅವನಿಗೂ ಅನುಭವದಲ್ಲಿ ಪ್ರಾಮಾಣ್ಯದ ಬುದ್ಧಿಯು ಹುಟ್ಟುತ್ತದೆ. ಈ ಕಾರಣದಿಂದ ಯಾವ ಪದಾರ್ಥಗಲೀ ಇದೆ ಅಥವಾ ಇಲ್ಲ ಎಂಬುವರೋ ಆ ಪದಾರ್ಥಗಳು ಯಾವ ಪ್ರಮಾಣಕ್ಕೆ ವಿಷಯವ್ವೋ ಅವುಗಳನ್ನು ಅನುಸರಿಸಿಯೇ (ಮಾನಾಧೀನಾಮೇಯಸಿದ್ಧಿಃ) ''ಇದೆ'' ''ಇಲ್ಲ'' ಎಂಬುದನ್ನು ನಿಶ್ಚಯಮಾಡಬೇಕು.

ಯಾವುದೋ ಒಂದು ಪ್ರಮಾಣಕ್ಕೆ ವಿಷಯವಲ್ಲದಿರುವಾಗ ಅದು ಇಲ್ಲವೆಂದು ಹೇಳುವುದು ಕೇವಲ ಅವಿವೇಕಿಗಳ ಮಾತೇ ಸರಿ .

### 3) (ಎ) ನಾಸ್ತಿಕ್ಯವಾದ ನಿರಾಸ:

### (ಅ) ಜೀವರ ಸ್ವರೂಪ, ಆದರ ಅನಾದಿತ್ವ ಮತ್ತು ನಿತ್ಯತ್ವಸಮರ್ಥನೆ.

ಪ್ರಕೃತ 'ನಾನು' ಇದ್ದೇನೆ, ಸುಖ ಅಥವಾ ದುಃಖ ಅನುಭವಿಸುತ್ತಿದ್ದೇನೆ ಎಂಬ ಪ್ರಸಿದ್ಧವಾದ ಅನುಭವವು ಯಾರಿಗೆ ಬರುತ್ತಿದೆ ಎಂಬುದನ್ನು ವಿಚಾರ ಮಾಡೋಣ.

ಆ ಜ್ಞಾನವು ಶರೀರಕ್ಕೆ ಆಗುವ ಪಕ್ಷದಲ್ಲಿ ಶವಕ್ಕೂ ಈ ಜ್ಞಾನ ಬರಬೇಕಾಗುತ್ತದೆ. ಕಣ್ಣು ಕಿವಿ ಮೊದಲಾದ ಇಂದ್ರಿಯಗಳಿಗೆ ಜ್ಞಾನ ಬರುತ್ತದೆ ಎಂದು ಹೇಳುವ ಪಕ್ಷದಲ್ಲಿ, ಆ ಇಂದ್ರಿಯಗಳು ಇಲ್ಲದವರಿಗೆ ''ನಾನು'' ಎಂಬ ಜ್ಞಾನವು ಬರಬಾರದಾಗಿತ್ತು. ಕಣ್ಣು ಮೊದಲಾದ ಇಂದ್ರಿಯಗಳು ಜ್ಞಾನವನ್ನು ಹುಟ್ಟಿಸುವುದರಿಂದ ಜ್ಞಾನಕರಣಗಳೆನಿಸುತ್ತವೆ. ಅವುಗಳೇ ಜ್ಞಾನಸ್ವರೂಪವಾದದ್ದಲ್ಲ. ನಾನು ಎಂಬ ಜ್ಞಾನವು ಪ್ರಾಣವಾಯುವಿಗೋ, ಜಾಠರಾಗ್ನಿಗೋ ಬರುತ್ತದೆ ಎಂದರೆ ಆ ಪ್ರಾಣವಾಯು ಮತ್ತು ಜಠರಾಗ್ನಿಗಳು ಗಾಢನಿದ್ರಾಕಾಲದಲ್ಲೂ ಇರುವುದರಿಂದ ಆಗಲೂ ಸಹ ಶರೀರದಲ್ಲಿ 'ನಾನು' ಎಂಬ ಜ್ಞಾನ ಇರಬೇಕಾಗಿತ್ತು, ಇರುತ್ತದೆ ಎಂದರೆ ಜಾಗ್ರತಾವಸ್ಥೆಗೂ

ನಿದ್ರಾವಸ್ಥಾಕ್ಕೂ ವ್ಯತ್ಯಾಸವೇ ಇಲ್ಲದಂತಾಗುತ್ತದೆ. ಆದುದರಿಂದ ಯಾವ ಇಂದ್ರಿಯಗಳಿಗೂ ವಿಷಯವಲ್ಲದ ಅತಿಸೂಕ್ಷ್ಮವಾದ ಯಾವ ವಸ್ತುವಿನ ಸಂಬಂಧ ಇಲ್ಲದಿದ್ದಾಗ ಈ ಶರೀರದಲ್ಲಿ ''ನಾನು'' ಎಂಬ ಜ್ಞಾನ ಬರುವಿದಿಲ್ಲವೋ; ಯಾವ ವಸ್ತು ಇಲ್ಲದಿರುವಾಗ ವೃದ್ಧಿ ಹ್ರಾಸ ಕಂಡುಬರುವುದಿಲ್ಲವೋ,ಅದನ್ನೇ ನಾವು ''ಜೀವ'' ಎಂದು ಕರೆಯುತ್ತೇವೆ. ಹೀಗೆ ಅನುಭವಕ್ಕೆ ತೋರುವ ಅತೀಂದ್ರಿಯವಸ್ತುಗಳನ್ನು ಎಲ್ಲರೂ ಒಪ್ಪಲೇಬೇಕಾಗಿದೆ.

ಆ ಜೀವನು ಅನಾದಿಯಾಗಿ (ಉತ್ಪತ್ತಿರಹಿತನಾಗಿ ) ಇರುವನೆಂದು ವಿವೇಕಿಗಳು ತಿಳಿಯುತ್ತಾರೆ. ಹುಟ್ಟಿದ ತಕ್ಷಣದಲ್ಲಿಯೇ ಮಗುವಿಗೇ ಸ್ತನ್ಯಪಾನದಲ್ಲಿ ಪ್ರವೃತ್ತಿ ಉಂಟಾಗುತ್ತದೆ. ಆ ಪ್ರವೃತ್ತಿಯು ಜ್ಞಾನಪುರಸ್ಸರವಾದುದರಿಂದ, ಜ್ಞಾನರಹಿತವಾದ ಶರೀರವೇ ಮೊದಲಾದ ಜಡಪದಾರ್ಥಗಳಿಗೆ ಬರುವ ಸಂಭವವಿಲ್ಲ. ಆಗ ತಾನೇ ಹುಟ್ಟಿದ ಮಗುವಿಗೆ ಆ ಜನ್ಮದಲ್ಲೇ ಹಾಲನ್ನು ಗುಟಕರಿಸುವ ಅನುಭವವು ಇರುವುದಿಲ್ಲ. ಆದುದರಿಂದ ಹಿಂದಿನ ಜನ್ಮದ ಸಂಸ್ಕಾರದಿಂದ ಹಾಲನ್ನು ಕುಡಿಯುವ ಬುದ್ಧಿಯು ಬಂದಿದೆಯೆಂದು ತಿಳಿಯಬೇಕು. ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾದಂತೆ ಒಬ್ಬಳು ಸಣ್ಣ ಹುಡುಗಿಯು ತನ್ನ ಹಿಂದಿನ ಜನ್ಮದ ಗಂಡ ಮತ್ತು ಮಕ್ಕಳನ್ನು ಗುರುತಿಸಿದಳು ಎನ್ನುವಾಗಲೂ; ಯಾವುದೋ ದೇಶದವನು ನಿದ್ರೆಮಾಡುತ್ತಿರುವಾಗ, ದೇಶಾಂತರದ (ತನಗೆ ಈ ಜನ್ಮದಲ್ಲಿ ಪರಿಚಯವಿಲ್ಲದಿರುವ) ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಿದ್ದನು ಎಂಬುದನ್ನು ಗಮನಿಸಿದಾಗಲೂ, ಕೆಲವು ಮಕ್ಕಳು ಚಿಕ್ಕವಯಸ್ಸಿನಲ್ಲೇ ಗಾನವಿದ್ಯೆಯಲ್ಲಿ ಮಹಾ ಪ್ರೌಢಿಮೆಯನ್ನು ಹೊಂದಿರುವುದನ್ನು ಗಮನಿಸಿದಾಗಲೂ ಅವೆಲ್ಲಾ ಹಿಂದಿನ ಜನ್ಮದ ಸಂಸ್ಕಾರಗಳೆಂದು ಒಪ್ಪಬೇಕಾಗುವ ಸಂದರ್ಭದಲ್ಲಿ ಜೀವ ಅನಾದಿ ಎಂದು ಸಿದ್ಧವಾಗುತ್ತದೆ. ಇದರಂತೆ 'ಜೀವ ನಿತ್ಯ(ನಾಶ ಇಲ್ಲದವನು) ಎಂದೂ ತಿಳಿಯಬೇಕು. ಅದು ಹೇಗೆಂದರೆ ಕೆಲವರು ಸತ್ತಮೇಲೆ ಪಿಶಾಚಿ ಆಗಿರುವುದು ಕಂಡುಬರುತ್ತದೆ. ಪಿಶಾಚಿಗಳೇ ಇಲ್ಲವೆಂದು, ಅದು ಮನಸ್ಸಿನ ಭ್ರಮೆಯೆಂದು ಕೆಲವರ ಅಭಿಪ್ರಾಯ. ಅದು ಸರಿಯಲ್ಲ. ನಮ್ಮ ಸಮೀಪಕ್ಕೆ ಪಿಶಾಚಿಯಿಂದ ಗ್ರಸ್ತವಾದ ಒಬ್ಬ ಹುಡುಗಿಯನ್ನು ಕರೆತಂದಿದ್ದರು. ನಾವು ಅದು ಪಿಶಾಚಿಯೋ ಅಥವಾ ಭ್ರಮೆಯೋ ಎಂದು

ಪರೀಕ್ಷಿಸಬೇಕೆಂದು ಮಂತ್ರಪೂರಿತವಾದ ನೀರನ್ನು ಪ್ರೋಕ್ಷಿಸಿದಾಗ ಪಿಶಾಚಿ ಮೈಮೇಲೆ ಬಂದುದಕ್ಕೆ ಗುರುತುಗಳು ಕಂಡು ಬಂದವು. ''ನೀನು ಯಾರು?'' ಎಂದು ಕೇಳಿದಾಗ ''ನಾನು ಒಬ್ಬ ಹುಡುಗ. ನನ್ನ ತಂದೆ ತಾಯಿಗಳು ನಾನು ಬೆಣ್ಣೆ ಕದ್ದು ತಿನ್ನುತ್ತಿರುವಾಗ ಬೇಡ ಎಂದು ಹೇಳಿದರು. ಒಂದು ದಿನ ಕದ್ದು ತಿನ್ನುತ್ತಿರುವಾಗ ನನ್ನ ತಾಯಿ ಸೌಟಿನಿಂದ ಹೊಡೆದಳು. ನನ್ನ ತಂದೆ ಅತಿಕೋಪದಿಂದ ಒನಕೆಯಿಂದ ಹೊಡೆದನು. ನಾನು ಸತ್ತು ಹೀಗೆ ಅಲೆಯುತ್ತಿರುವಾಗ ಒಂದು ಸಮಯದಲ್ಲಿ ಈ ಹುಡುಗಿಯನ್ನು ಹಿಡಿದುಕೊಂಡೆ'' ಎಂದು ಹೇಳಿತು. ಇಂತಹ ದೃಷ್ಟಾಂತಗಳು ಮನುಷ್ಯರ ಜೀವನದಲ್ಲಿ ಸಾವಿರಾರು ಕಂಡುಬರುತ್ತಿವೆ. ಗ್ರಂಥವಿಸ್ತಾರಭಯದಿಂದ ಹೆಚ್ಚಿಗೆ ಹೇಳುತ್ತಿಲ್ಲ. ಇದರಂತೆ ಮಂತ್ರವಾದಿ ಕೈಗೆ ಸಿಕ್ಕಿ, ಪಿಶಾಚಿ ಬಿಟ್ಟು ಹೋಗುವ ಸಂದರ್ಭದಲ್ಲಿ 'ಬಿಟ್ಟು ಹೋದುದಕ್ಕೆ ಒಂದು ಗುರುತನ್ನು ಕೊಟ್ಟು ಹೋಗು' ಎಂದು ಹೇಳಿದಾಗ ಅದು ಒಂದು ದೊಡ್ಡ ಮರದ ಕೊಂಬೆಯನ್ನು ಬೀಳಿಸಿಯೋ, ದೊಡ್ಡ ಕಲ್ಲನ್ನು ಅವನು ಹೇಳಿದ ಜಾಗದಲ್ಲಿ ಇಟ್ಟೋ ಅಥವಾ ಅಮಾನುಷವಾದ ಯಾವುದೋ ಒಂದು ಕೆಲಸವನ್ನು ಮಾಡಿ ಹೊರಟೊ ಹೋಗುತ್ತಿರುವುದು ಅನೇಕರಿಗೆ ಅನುಭವಕ್ಕೆ ಬಂದ ವಿಷಯವೇ ಆಗಿದೆ. ಇದರಂತೆ ಕೈಸ್ತರ, ಮಹಮದೀಯರ ಗೋರಿಗಳಲ್ಲಿ ಅಮಾನುಷಕೃತ್ಯವು ಕಂಡು ಬರುತ್ತಿದೆ. ಮೈಸೂರಿನ ಪರಕಾಲಮಠದಿಂದ ರೈಲ್ವೆ ನಿಲ್ದಾಣಕ್ಕೆ ಹೋಗುವ ಮಾರ್ಗದಲ್ಲಿ ಒಂದು ಮಹಮದೀಯರ ಗೋರಿ ಇದೆ. ಪ್ರಾಯಃ ಪ್ರತಿಶುಕ್ರವಾರವೂ ಆ ಗೋರಿಗೆ ಕೆಲವರು ಹರಸಿಕೊಂಡು ಕಡ್ಲೇಪುರಿ ಇವುಗಳನ್ನು ಹಂಚುತ್ತಾರೆ. ಅದರಿಂದ ಕೆಲವರಿಗೆ ಅನುಕೂಲವಾಗುತ್ತಿರುವುದರಿಂದ ಗೋರಿಯಾದ ಆ ವ್ಯಕ್ತಿಯು (ಜೀವ) ಆ ಗೋರಿಯಲ್ಲಿದ್ದು ಅವರುಗಳಿಗೆ ಅನುಕೂಲ ಮಾಡುತ್ತಿದ್ದಾನೆ ಎಂದು ನಂಬಬೇಕಾಗಿದೆ.

ಕೋಲಾರದಲ್ಲಿರುವ ಸೈನಿಕರು ಇದ್ದ ಬೀದಿಗಳ ಮಧ್ಯದಲ್ಲಿ ಅಕ್ಕಪಕ್ಕದಲ್ಲಿ ಅಕ್ಕತಂಗಿಯರಾದ ಇಬ್ಬರು ಕ್ರೈಸ್ತರ ಹುಡುಗಿಯರ ಗೋರಿ ಇದೆ. ಆ ಹುಡುಗಿಯರು ಸುತ್ತಮುತ್ತ ಇರುವ ಜನಾಂಗಕ್ಕೆ ನಿಮಗೆ ಮಲೇರಿಯಾ ಮೊದಲಾದ ಉಪದ್ರವ ಬಾರದಂತೆ ನಾವಿಬ್ಬರೂ ನೋಡಿ ಕೊಳ್ಳುತ್ತೇವೆ. ನಮ್ಮಿಬ್ಬರನ್ನು ಇಲ್ಲಿಂದ ತೆಗೆಯಬೇಡಿ

ಎಂದು ಜನಗಳಿಗೆ ಹೇಳಿಕೊಂಡ ಅವರುಗಳಿಗೆ ತೊಂದರೆಬಾರದಂತೆ ನೋಡಿಕೊಳ್ಳುತ್ತಿರುವುದನ್ನು ಗಮನಿಸಿದಾದಲೂ, ಶರೀರ ನಾಶವಾದರೂ ಜೀವರು ನಾಶವಿಲ್ಲದವರು ಎಂದು ತಿಳಿದುಬರುತ್ತಿದೆ. ಇವುಗಳು ಅತೀಂದ್ರಿಯ ವಸ್ತುಗಳು ಇವೆ ಎಂಬುದಕ್ಕೂ ಜೀವರು ನಿತ್ಯ ಎಂಬುದಕ್ಕೂ ಪ್ರಮಾಣವಾಗುತ್ತವೆ.ಈ ಅತೀಂದ್ರಿಯ ವಸ್ತುಗಳನ್ನು ನಂಬಬೇಕಾದ ವಿಷಯದಲ್ಲಿ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ದಕ್ಷಿಣದೇಶದಲ್ಲಿ 'ಚೇಡಿ' ಎಂಬ ದೇವತೆಯನ್ನು ವಶಪಡಿಸಿಕೊಂಡು, ತಮ್ಮ ತೋಟಗಳಲ್ಲಿ ಕಳ್ಳತನ ಆಗದಂತೆ ರಕ್ಷಣೆ ಮಾಡಿಕೊಳ್ಳುತ್ತಿರುವುದು ಕಂಡು ಬಂದಿದೆ. ಶಕ್ತಿ ಉಪಾಸಕರಾದ ಕೆಲವರು 'ಭೈರವಿ' ಮೊದಲಾದ ದುರ್ದೇವತೆಗಳನ್ನು ವಶಪಡಿಸಿ ಕೊಂಡು ಲೋಕಕ್ಕೆ ಆಶ್ಚರ್ಯಕರವಾದ, ಪರರಿಗೆ ಉಚ್ಚಾಟನ ಮಾರಣಾದಿ ಹಿಂಸೆ ಕೊಡುವ ಕಾರ್ಯಗಳನ್ನು ಮಾಡುವುದು ಕಂಡು ಬರುತ್ತಿದೆ.ಇವುಗಳನ್ನು ನಂಬದವರಿಗೆ ಬುದ್ಧಿ ಕಲಿಸುವ ಮಾರ್ಗವು ಒಂದಿದೆ, ಅದೇನೆಂದರೆ ಅವರ ತಲೆಯ ಕೂದಲು, ಚರ್ಮ, ಉಗುರು ಇವುಗಳಲ್ಲಿ ಯಾವುದಾದರೂ ಒಂದರ ಚೂರನ್ನು ಮಂತ್ರವಾದಿಗೆ ಕೊಟ್ಟು ಅಭಿಚಾರಿಕ ಕ್ರಿಯಾ ಮಾಡಿಸಿದಾಗ ಅವರು ಬಹುದುಃಖಕ್ಕೆ ಗುರಿಯಾಗಿ ಕಣ್ಣಿಗೆಕಾಣಿಸದ, ತಮ್ಮ ದುಃಖಕ್ಕೆ ಕಾರಣವಾದ ಯಾವುದೋ ಭೂತಪ್ರೇತಾದಿಗಳು ಪೀಡಿಸುತ್ತಿವೆಯೆಂಬುದನ್ನು ನಂಬಬೇಕಾಗುತ್ತದೆ. ಅದಕ್ಕೆ ವಿರುದ್ಧವಾಗಿ ನಾವು ಶಾಸ್ತ್ರದಲ್ಲಿ ಹೇಳುವ ರೀತಿಯಿಂದ ಋಷಿ ಮತ್ತು ದೇವತೆಗಳ ಸೇವೆ ಮಾಡಿದಾಗ ಜಗತ್ತಿಗೆ ಕ್ಷೇಮಕರವಾದ ನಮ್ಮ ಇಷ್ಟಾರ್ಥಗಳನ್ನು ಹೊಂದಬಹುದಾಗಿದೆ. ಆದ್ದರಿಂದ ಕಣ್ಣಿಗೆ ಕಾಣಿಸದಿದ್ದರೂ ದೇವತಾ ಪುರುಷರನ್ನು ಋಷಿಗಳನ್ನು ನಂಬಬೇಕು. ನಾವು ಇಂತಹ ಋಷಿಗಳ ಗೋತ್ರದವರೆಂದು ಹೇಳಿಕೊಳ್ಳುತ್ತಿದ್ದೇವೆ. ಆ ಋಷಿಗಳು ಇರಲಿಲ್ಲವೆಂದು ಹೇಳುವವರು ಭಾರತದೇಶದ ಅಥವಾ ಪರದೇಶದ ಚರಿತ್ರೆಗಳನ್ನು ನಂಬುವುದಾದರೂ ಹೇಗೆ? ಹಾಗೇ ನಮ್ಮ ಗೋತ್ರದ ಮೂಲಪುರುಷರಾದ ಆ ಋಷಿಗಳನ್ನು ನಂಬದವರು ಅನುವಂಶಿಕ ನಾಮ (family name)ವನ್ನು ಸಹ ಅಳಿಸಿಬಿಡಬೇಕಾಗುತ್ತದೆ. ಆ ಋಷಿಗಳು ಹಿಂದೆ ಇದ್ದರು, ಅನೇಕ ಸಾವಿರ ವರ್ಷ ಕಳೆದು ಹೋದುದರಿಂದ ಈಗ ಇಲ್ಲವೆಂದು ಹೇಳುವುದು ಸರಿಯಲ್ಲ, ನಾವು ನೋಡುತ್ತಿರುವಂತೆ ಕೆಲವು ಪ್ರಾಣಿಗಳು

ಎರಡು ಗಂಟೆ, ಕೆಲವು ಒಂದು ದಿನ, ಕೆಲವು ತಿಂಗಳು , ಕೆಲವು ವರ್ಷಗಟ್ಟಲೆ ಬದುಕುತ್ತಿರುವುದನ್ನು ನೋಡುತ್ತಿದ್ದರೂ, ಮನುಷ್ಯರಾದ ನಾವು ಎಂಭತ್ತುವರ್ಷ, ನೂರು ವರ್ಷ, ಅದರ ಮೇಲೂ ಬದುಕುತ್ತಿರುವುದು ಕಂಡುಬರುತ್ತಿದೆ. ಮತ್ತೆ ಕೆಲವು ವೃಕ್ಷಗಳು ಅನೇಕ ನೂರುವರ್ಷಗಳು ಬದುಕಿರುವುವು. ಅದರಂತೆ ಕಾಗೆ, ಆನೆ ಇವುಗಳು ಸುಮಾರು ಸಾವಿರ ವರ್ಷ ಬದುಕಿರುವುದಕ್ಕೆ ಆಧಾರಗಳಿವೆ. ಭೂತಪ್ರೇತಗಳು ಹತ್ತಾರು ಸಾವಿರ ವರ್ಷ ಬದುಕಿರುತ್ತವೆ. ದೈತ್ಯರು, ರಾಕ್ಷಸರು ಅನೇಕ ಯುಗಗಳು ಬದುಕಿರುವುದನ್ನು ಶಾಸ್ತ್ರಾಧಾರಗಳಿಂದ ಆಸ್ತಿಕರು ನಂಬಬೇಕಾಗಿದೆ. ಈ ಮಧ್ಯದಲ್ಲಿ ಹಿಂದೂ ದೇಶದವರಾದ ನಾವು ನಂಬುವ ವೇದ, ರಾಮಾಯಣ, ಮಹಾಭಾರತ ಗ್ರಂಥಗಳಿಂದ ಮಹರ್ಷಿಗಳು ಈಗಲೂ ಇದ್ದಾರೆಂದು ಸಕಾರಣವಾಗಿ ನಂಬಲೇಬೇಕಾಗಿದೆ. ಆ ಗ್ರಂಥಗಳಲ್ಲಿ ಪ್ರಸಿದ್ಧರಾದ ಅಂಜನೇಯ, ಅಶ್ವತ್ಥಾಮಾಚಾರ್ಯರು, ವಿಭೀಷಣ, ವಸಿಷ್ಠ ವಿಶ್ವಾಮಿತ್ರ ಮುಂತಾದವರು ಈಗಲೂ ಇದ್ದಾರೆಂದು ನಂಬುತ್ತಿರುವುದು ಕೇವಲ ಮೂಢನಂಬಿಕೆಯಾಗಲಾರದು. ಆಂಜನೇಯ, ತ್ರೇತಾಯುಗದವರಾದರೂ ಅವರ ಸೇವಾದಿಂದ ನಮ್ಮ ಅನೇಕ ಇಷ್ಟಾರ್ಥಗಳನ್ನು ಈಗಲೂ ನೆರವೇರಿಸಿಕೊಳ್ಳುತ್ತಿದ್ದೇವೆ. ಆದ್ದರಿಂದ ಅವರು ಈಗಲೂ ಇದ್ದಾರೆಂದು ದೃಢಪಡಿಸಿಕೊಳ್ಳುತ್ತಿದ್ದೇವೆ. ಇದರಂತೆ ದೇವತಾಪುರುಷರುಗಳು ಭೂಮಿಯಲ್ಲಿ ಹುಟ್ಟಿರುವಾಗ ಜನರುಗಳಿಗೆ ಕಂಡೂ ಕಾಣದಂತೆ ಇರುವುದನ್ನು ಗಮನಿಸಿದಾಗ ಅಂದರೆ ನಮ್ಮ ಕಣ್ಣಿಗೆ ಕಾಣಿಸದೇ ವೃಂದಾವನಾದಿಗಳಲ್ಲಿ ಇದ್ದರೂ, ನಾವು ಮಾಡುವ (ವೃಂದಾವನ) ಸೇವೆಗೆ ಸಂತುಷ್ಟರಾಗಿ ಇಷ್ಟಾರ್ಥಗಳನ್ನು ಕೊಡುತ್ತಿರುವುದು ಕಂಡುಬರುತ್ತಿದೆ. ಒಂದು ಕಂಬದಲ್ಲಿ (electrical pole) ವಿದ್ಯುತ್(current) ಹಾಯುತ್ತಿರುವಾಗ (ooze ಆಗುತ್ತಿರುವಾಗ) ವಿದ್ಯುತ್ ನಮ್ಮ ಕಣ್ಣಿಗೆ ಕಾಣಿಸದೇ ಇದ್ದರೂ, ಅದರ ಪರಿಣಾಮದ ಶಾಕ್ (Shock)ಹೊಡೆಯುತ್ತಿರುವಾಗ ಅದರ ಅಸ್ತಿತ್ವವನ್ನು ನಂಬಲೇಬೇಕಷ್ಟೇ! ಹಾಗೆಯೇ ದೇವತೆಗಳ, ಋಷಿಗಳ, ನವಗ್ರಹಗಳ ಸೇವಾದಿಂದ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿ ಕಂಡು ಬರುತ್ತಿರುವುದರಿಂದ ಅವರುಗಳು ಈಗಲೂ ಇದ್ದಾರೆಂದು

ನಂಬಲೇಬೇಕು. ಇದಕ್ಕೆ ಸಾವಿರಾರು ದೃಷ್ಟಾಂತಗಳನ್ನು ಹೇಳಬಹುದಾಗಿದ್ದರೂ ಗ್ರಂಥವಿಸ್ತಾರ ಭಯದಿಂದ ಕೆಲವನ್ನು ಮಾತ್ರ ಹೇಳುತ್ತೇವೆ.

1) ಮೈಸೂರಿಗೆ ಹದಿನೆಂಟು ಮೈಲಿ ದೂರದಲ್ಲಿರುವ ತಿರುಮಕೂಡಲಿನಲ್ಲಿನ ಬ್ರಹ್ಮಾಶ್ವತ್ಥದ ಕೆಳಗೆ ವೃಂದಾವನಸ್ಥರಾಗಿ ವಿರಾಜಮಾನರಾಗಿರುವ ಶ್ರೀ ರಘುನಾಥಯತಿಗಳ ( ಶ್ರೀ ಶೇಷಚಂದ್ರಿಕಾಚಾರ್ಯರ) ವಿಷಯದಲ್ಲಿ ಒಂದು ಐತಿಹ್ಯವಿರುವುದನ್ನು ಗಮನಿಸಬೇಕು. ಹೈದರಾಲಿ ಎಂಬ ತುರುಷ್ಕರಾಜನು ಕುಹಕರ ಮಾತನ್ನು ಕೇಳಿ ಆ ಜಾಗ ಅವರಿಗೆ ಕೊಡಬಾರದೆಂದು ಅಡ್ಡಿ ಬಂದಾಗ ವೃಂದಾವನಸ್ಥರಾದ ಸ್ವಾಮಿಗಳವರು ಹೈದರಾಲಿಯ ಸ್ವಪ್ನದಲ್ಲಿ ತಮ್ಮ ರೂಪವನ್ನು ದರ್ಶನಕೊಟ್ಟು, ಕಾವೇರಿ ಪ್ರವಾಹದಲ್ಲಿ ಟೀಪುಸುಲ್ತಾನ್ ತೇಲಿಕೊಂಡು ಹೋಗುತ್ತಿರುವಂತೆ ತೋರಿಸಿದಾಗ, ಹೈದರಾಲಿ ತನ್ನ ಮಗನನ್ನು ಕಾಪಾಡಿ ಎಂದು ಸ್ವಾಮಿಗಳವರನ್ನು ಪ್ರಾರ್ಥಿಸಿದನು. ಅವರು ನಮಗೆ ಇಲ್ಲಿ ಜಾಗಕೊಡುವ ಪಕ್ಷದಲ್ಲಿ ಕಾಪಾಡುತ್ತೇವೆಂದು ಹೇಳಿ, ಅವನಿಂದ ಸ್ಥಳ ತೆಗೆದುಕೊಂಡು ಅದ್ಯಾಪಿ ಅಲ್ಲೇ ವೃಂದಾವನದಲ್ಲಿ ವಿರಾಜಮಾನರಾಗಿದ್ದಾರೆ. ಇದಕ್ಕೆ ಗುರುತಾಗಿ ಹೈದರ್‌ನಿಂದ ನಿಯಮಿಸಲ್ಪಟ್ಟ ಮಾಸ ಮಾಹೆಯು ಈಗಲೂ ಅರ್ಚಕರಿಗೆ ತಲುಪುತ್ತಿದೆ.

2) ಟೀಪುಸುಲ್ತಾನ್ ಕಾಲದಲ್ಲಿ ಅವನ ಪಟ್ಟದ ಆನೆಗೆ ಕಣ್ಣಿನ ನೋವು ಬಂದು ಅದು ಬಹಳವಾಗಿ ಬಳಲುತ್ತಿರುವಾಗ ಯಾವ ವೈದ್ಯರೂ ಅದರಚಿಕಿತ್ಸೆಯನ್ನು ತಿಳಿಯದಂತೆ ಆಗಿದ್ದರು. ಯಾರ ಮಾತಿನಂತೆಯೋ ಆನೆಯಿಂದ ನಂಡುಂಡೇಶ್ವರನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿಸಿದರು. ಕಣ್ಣಿನ ರೋಗ ಪರಿಹಾರವಾಯಿತು. ಅಂದಿನಿಂದ ಟೀಪು ನಂಜುಂಡೇಶ್ವರನನ್ನು ''ಹಕೀಮ ನಂಜುಂಡೇಶ್ವರ'' ಎಂಬುದಾಗಿ ಕರೆಯುತ್ತಿದ್ದನೆಂಬ ಐತಿಹ್ಯವಿದೆ. ಅಮ್ಮನವರ ದೇವಸ್ಥಾನದ ಪಕ್ಕದಲ್ಲಿಯೇ ಟೀಪುಸುಲ್ತಾನನಿಂದ ಕೊಡಲ್ಪಟ್ಟ ಪಚ್ಚೆಲಿಂಗವನ್ನು ಈಗಲೂ ಕಾಣಬಹುದು.

3) ಮೈಸೂರು ಸಮೀಪದಲ್ಲಿರುವ ನಂಜನಗೂಡಿನಿಂದ ಓರ್ವ ದಂಪತಿಗಳು

ಸುಮಾರು 50 ವರ್ಷದ ಕೆಳಗೆ, (ದಂಪತಿಗಳ ಮಧ್ಯದಲ್ಲಿ ಹೆಂಗಸಿಗೆ ಕಣ್ಣು ಕಾಣಿಸದೇ ಇರುವಾಗ) ಮಂತ್ರಾಲಯಕ್ಕೆ ಹೋಗಿ ಸೇವಾ ಮಾಡಿದರು. ರಾಯರು ಸ್ವಪ್ನದಲ್ಲಿ ಆಕೆಗೆ ಶಸ್ತ್ರಚಿಕಿತ್ಸೆ (operation)ಮಾಡಿ ಕಣ್ಣು ಕೊಟ್ಟರು. ನಂತರ ಅವರಿಂದ ಹುಟ್ಟಿದ ರಾಘವೇಂದ್ರ ಎಂಬ ಹುಡುಗನನ್ನು, ಮೈಸೂರಿನ ಒಂಟಿಕೊಪ್ಪಲ್‌ಗೆ ಹೋಗುವ ದಾರಿಯಲ್ಲಿರುವ ಅರಸು ಬಂಗ್ಲೆಯ ಆಂಜನೇಯಸ್ವಾಮಿಗುಡಿಯಲ್ಲಿ ನಾವು ನೋಡಿದ್ದೇವೆ.

4. ಒಬ್ಬ ಬ್ರಾಹ್ಮಣನು ತನ್ನ ಮುಖದಿಂದ ಅತಿ ದುರ್ಗಂಧ ಬರುತ್ತಿರುವಾಗ ಅದನ್ನು ಸಹಿಸಲಾಗದೇ ಮಂತ್ರಾಲಯಕ್ಕೆ ಸೇವೆಗೆಂದು ಹೋದನು. ರಾಯರು ಅವನಿಗೆ ಸ್ವಪ್ನದಲ್ಲಿ 'ನೀನು ಹಿಂದಿನ ಜನ್ಮದಲ್ಲಿ ಮುಸಲ್ಮಾನ್ ಆಗಿದ್ದೆ. ಆಗಿನ ನಿನ್ನ ಮಗನು ನೀನು ಸತ್ತದಿವಸ ನಿನ್ನ ಪ್ರೀತಿಗೋಸ್ಕರ ಒಬ್ಬ ಖಾಜಿಗೆ ಮಾಂಸವನ್ನು ತಿನ್ನುವುದಕ್ಕೆ ಕೊಡುತ್ತಿದ್ದಾನೆ. ಆ ನಿಮಿತ್ತದಿಂದ ನಿನ್ನ ಮುಖದಲ್ಲಿ ದುರ್ವಾಸನೆ ಬರುತ್ತಿದೆ. ಅವನ ಊರಿಗೆ ಹೋಗಿ ನೀನು ಅವನ ತಂದೆ ಎಂಬುದಕ್ಕೆ ತಕ್ಕ ಗುರುತನ್ನು ಹೇಳಿ, ಖಾಜಿಗೆ ಮುಂದೆ ಮಾಂಸವನ್ನು ಕೊಡಬೇಕಾಗಿಲ್ಲವೆಂದು ತಿಳಿಸು'' ಎಂದು ಸೂಚನೆಯನ್ನು ಕೊಟ್ಟರು. ಆ ಬ್ರಾಹ್ಮಣನು ಅದರಂತೆ ಕೆಲಸಮಾಡಿದ ಮೇಲೆ ಅವನ ಮುಖದಿಂದ ಬರುತ್ತಿದ್ದ ದುರ್ಗಂಧವು ನಿವೃತ್ತಿ ಆಯಿತು. ಆತನು ತುಮಕೂರಿನಲ್ಲಿ ವಾಸವಾಗಿದ್ದಾನೆಂದು ತಿಳಿದು ಬರತ್ತದೆ.

5) ಹೊಟ್ಟೆನೋವಿನಿಂದ ಬಳಲುತ್ತಿದ್ದ ಒಬ್ಬ ರೆಡ್ಡಿಯು ಎಷ್ಟು ಸಹಸ್ರ ರೂಪಾಯಿಗಳನ್ನು ವ್ಯಯಮಾಡಿದರೂ ತನ್ನ ರೋಗ ನಿವೃತ್ತಿಯಾಗದೇ ಇದ್ದಾಗ ಮಂತ್ರಾಲಯಕ್ಕೆ ಹೋಗಿ ಸೇವೆ ಮಾಡಿದನು. ಆಗ ರಾಯರು ಸ್ವಪ್ನದಲ್ಲಿ ಶಸ್ತ್ರಚಿಕಿತ್ಸೆ ಯದ್ವಾರಾ ಅವನ ರೋಗವನ್ನು ಪರಿಹಾರ ಮಾಡಿದರು. ನಂತರ ಅವನು ಅನೇಕ ಲಕ್ಷ ದ್ರವ್ಯ ವೆಚ್ಚಮಾಡಿ ಮಂತ್ರಾಲಯದ ಮಠವನ್ನು ಸುಂದರವಾಗಿ ಕಟ್ಟಿಸಿರುವದನ್ನು ಈಗಲೂ ನಾವು ಕಾಣಬಹುದು. ಅತನಿಗೆ ಶಸ್ತ್ರಚಿಕಿತ್ಸೆಯಾದ ಗುರುತನ್ನು ನೋಡಿದವರು ಅನೇಕರಿದ್ದಾರೆ.

6) ಯಾವ ಔಷಧಿಗೂ ಗುಣವಾಗದ ಗುಲ್ಮರೋಗದಿಂದ ಬಳಲುತ್ತಿದ್ದ ಓರ್ವ ಹೆಣ್ಣು ಮಗಳು ಗಂಡನಸಮೇತ ಮಂತ್ರಾಲಯಕ್ಕೆ ಹೋಗಿ ಕೆಲವುದಿವಿಸ ಸೇವೆಮಾಡಿದ ನಂತರ ರಾಯರು 'ತಿರುಕೋಯಿಲೂರ್‌ಗೆ ಹೋಗಿ ಶ್ರೀ ರಘೋತ್ತಮತೀರ್ಥರ (ಶ್ರೀಭಾವಭೋಧಕರ) ಸೇವಾ ಮಾಡಿ' ಎಂಬುದಾಗಿ ಸ್ವಪ್ನದಲ್ಲಿ ಸೂಚನೆಕೊಟ್ಟರು. ಅದರಂತೆ ದಂಪತಿಗಳು ಕೆಲವುದಿನ ರಘೋತ್ತಮರ ಸೇವೆ ಮಾಡಿ, ಒಂದು ದಿನ ರಾತ್ರಿ ಛತ್ರದಲ್ಲಿ ಮಲಗಿದ್ದಾಗ ಮರುದಿವಿಸ ಬೆಳಗಿನಜಾವ ಸ್ವಪ್ನದಲ್ಲಿ ಇಬ್ಬರು ವೈದ್ಯರುಗಳು ಬಂದು ಆಕೆಯ ಹೊಟ್ಟೆಯನ್ನು ಶಸ್ತ್ರಚಿಕಿತ್ಸೆ ಮಾಡಿ ಮಾಂಸದ ಪಿಂಡವನ್ನು ಹೊರಗೆ ಹಾಕಿದರು . ಆ ಮಾಂಸಕ್ಕಾಗಿ ಕಾಗೆಗಳು ಕೂಗಿಕೊಳ್ಳುತ್ತಿರುವಾಗ ಗಂಡನಿಗೆ ಮೊದಲು ಎಚ್ಚರವಾಯಿತು. ''ಬೆಳಗಾಯಿತು, ರಾಯರ ಸೇವೆ ಮಾಡೋಣ'' ಎಂದು ಹೆಂಡತಿಯನ್ನು ಎಚ್ಚರಗೊಳಿಸಿದನು. ಆಗ ಆಕೆಯು ತನ್ನ ಹೊಟ್ಟೆಯನ್ನು ಸವರಿಕೊಳ್ಳುತ್ತಾ ಎದ್ದು ಗಂಡನಿಗೆ ಸ್ವಪ್ನವನ್ನು ತಿಳಿಸಿದಳು.

7)ಮನ್ರೋ ಎಂಬ ಇಂಗ್ಲೀಷ್ ರಾಯಭಾರಿ ಮಂತ್ರಾಲಯಕ್ಕೆ ಹೋಗಿ ಈ ಕಲ್ಲಿಗೆ ಏಕೆ ಜಹಗೀರ್‌ಗಳು ಎಂಬುದಾಗಿ ಆಕ್ಷೇಪಿಸಿದಾಗ ರಾಯರು ಆವನಿಗೆ ದರ್ಶನವನ್ನು ಕೊಟ್ಟರು. ಅವನು ತನ್ನ ಹ್ಯಾಟ್ ತೆಗೆದು wish ಮಾಡಿದಾಗ, ಅವನ ಹ್ಯಾಟಿನಲ್ಲಿ ರಾಯರು ಮಂತ್ರಾಕ್ಷತೆಯನ್ನು ಕರುಣಿಸಿದ್ದುದು ಮದ್ರಾಸ್ ಗೆಜೆಟ್‌ನಲ್ಲಿ ಪ್ರಕಟವಾಗಿದೆ.

ಹೀಗೆ ವೈದ್ಯರಿಂದಲೂ ಪರಿಹಾರ ಮಾಡಲು ಶಕ್ಯವಲ್ಲದ ಅನೇಕ ರೋಗಗಳನ್ನು ಬೃಂದಾವನಸ್ಥರಾಗಿರುವ ಅನೇಕಮಾಧ್ವಯತಿಗಳು ಇಂದಿಗೂ ಪರಿಹಾರಮಾಡುತ್ತಿರುವುದನ್ನು ಮತ್ತು ತಮ್ಮ ಭಕ್ತರಿಗೆ ಇಷ್ಟವಾದ ವಿದ್ಯಾ ಉದ್ಯೋಗ, ಹೆಂಡತಿ, ಮಕ್ಕಳು ಮುಂತಾದವುಗಳನ್ನು ನೆರವೇರಿಸಿಕೊಡುತ್ತಿರುವುದನ್ನು ನೋಡಬಹುದಾಗಿದೆ.

8)ಅನೇಕರು ಉಚ್ಛಿಷ್ಟಗಣಪತಿ ಮತ್ತು ಶಕ್ತಿದೇವತಾ ಮೊದಲಾದವನ್ನು

ಉಪಾಸನೆಮಾಡಿ ಲೋಕಕ್ಕೆ ಆಶ್ಚರ್ಯಕರವಾದ ವಿಷಯಗಳನ್ನು ಪ್ರದರ್ಶನ ಮಾಡುತ್ತಿರುವದನ್ನು ಈಗಲೂ ಕಾಣಬಹುದು.

9) ವಿಜಯನಗರದ ಮಂತ್ರಿ ಎಂದು ಮೆರೆದ ವಿದ್ಯಾರಣ್ಯರು ಶಾಸ್ತ್ರದಲ್ಲಿ ಹೇಳಿದಂತೆ ಲಕ್ಷ್ಮೀದೇವಿಯರ  ಉಪಾಸನೆಯಿಂದ ಸ್ವರ್ಣವೃಷ್ಟಿ ಆಗುವುದೆಂಬದನ್ನು ತಿಳಿದು, ಲಕ್ಷ್ಮೀಸೂಕ್ತ ಪುನಶ್ಚರಣೆಮಾಡಿದಾಗ, ದೇವಿ ಸ್ವಪ್ನದಲ್ಲಿ, ಈ ಜನ್ಮದಲ್ಲಿ ನಿನಗೆ ಆ ಯೋಗವಿಲ್ಲ, ಮುಂದಿನ ಜನ್ಮದಲ್ಲಿಕೊಡುತ್ತೇನೆ ಎಂದು ಹೇಳಿದರು. ವಿದ್ಯಾರಣ್ಯರು ತಮ್ಮ ಬುದ್ಧಿ ಚಾತುರ್ಯವನ್ನು ತೋರಿಸಿಕೊಳ್ಳುತ್ತಾ ಸಂನ್ಯಾಸವನ್ನು ತೆಗೆದುಕೊಂಡು ಅದು ಶಾಸ್ತ್ರದಂತೆ ಜನ್ಮಾಂತರವಾದ್ದರಿಂದ ಸ್ವರ್ಣವೃಷ್ಟಿಯನ್ನು ಕೊಡಬೇಕೆಂದು ದೇವಿಯನ್ನು ಪ್ರಾರ್ಥಿಸಿದರು. ಅದರಂತೆ ಸ್ವರ್ಣವೃಷ್ಟಿ ಆಯಿತು. ಈ ಐತಿಹ್ಯವು ಜನಾಂಗಲ್ಲಿ ಪ್ರಸಿದ್ಧವಾದದ್ದೇ ಆಗಿದೆ.

10)ನಮ್ಮ ಮಠದಲ್ಲೇ ಇದ್ದ ಶ್ರೀನಿವಾಸ ಎಂಬ ಹುಡುಗ ಒಂದು ಸಂದರ್ಭದಲ್ಲಿ ಎರಡು ಏಕಾದಶಿ ಉಪವಾಸಮಾಡಿ ಅಂಗಳದಲ್ಲಿ ಕುಳಿತಿದ್ದಾಗ ಒಂದು ಚೇಳು ಕುಟುಕಿತು. ಅವನು ಉಪವಾಸದ ಜೊತೆಯಲ್ಲಿ ಆದ ಈ ವೇದನೆಯನ್ನು ತಡಿಯಲಾರದೆ ಸಂಕಟಪಡುತ್ತಿರುವಾಗ ಮಠದಲ್ಲೇ ಇದ್ದ ಇನ್ನೊಬ್ಬ ಹುಡುಗ ಅವನನ್ನು ಸೈಕಲ್ ಮೇಲೆ ಕುಳ್ಳಿರಿಸಿಕೊಂಡು ಮಂತ್ರವಾದಿಯ ಸಮೀಪಕ್ಕೆ ಕರೆದುಕೊಂಡು ಹೋದನು. ಮಂತ್ರವಾದಿ ಮಂತ್ರಹಾಕಿದ ತಕ್ಷಣ ವಿಷನಿಮಿತ್ತವಾದ ನೋವು ಪರಿಹಾರವಾಯಿತು. ನಗುನಗುತ್ತಾ ಮಠಕ್ಕೆ ನಡೆದುಕೊಂಡು ಬಂದನು. ಆಯಾಸಪರಿಹಾರಕ್ಕೆ ಸ್ವಲ್ಪ ಮಜ್ಜಿಗೆ ತೆಗೆದುಕೋ ಎಂಬುದಾಗಿ ಮಂತ್ರವಾದಿ ಹೀಳಿದ್ದರೂ, ಆ ಹುಡುಗ ತನಗೆ ದೇವರಲ್ಲಿ ಉಂಟಾದ ಭಕ್ತಿ, ವಿಶ್ವಾಸಗಳಿಗೆ ವಶನಾಗಿ ಮಜ್ಜಿಗೆಯನ್ನು ತೆಗೆದುಕೊಳ್ಳದೇ ಉಪವಾಸವಿದ್ದು ಮರುದಿನ ಬೆಳಿಗ್ಗೆ ಮಠದ ಕೆಲಸಮಾಡಿ ನಂತರ ಊಟ ಮಾಡಿದನು.

ಹೀಗೆ ಮಂತ್ರಗಳ ಸಿದ್ಧಿಯಿಂದಲೂ ನಮ್ಮ ಇಷ್ಟಾರ್ಥಗಳನ್ನು ಹೊಂದಬಹುದಾಗಿದೆ. ಕಾರೀರಿಯಾಗದಿಂದಲೋ ಅಥವಾ ವಿರಾಟ ಪರ್ವಪಾರಾಯಣದಿಂದಲೋ ಮಳೆಯನ್ನು ಹೊಂದಬಹುದು. ಶ್ರೀನಿವಾಸ ಕಲ್ಯಾಣ, ಸೀತಾಕಲ್ಯಾಣ ಕಥಾ ಕೇಳುವುದರಿಂದ ಹೆಣ್ಣು ಮಕ್ಕಳು ಶೀಘ್ರವೇ ವಿವಾಹವಾಗುತ್ತಾರೆ. ರಾಮಸೇತು ದರ್ಶನದಿಂದ ಅನಿಷ್ಟನಿವೃತ್ತಿ, ಇಷ್ಟಪ್ರಾಪ್ತಿ ಹೊಂದಬಹುದು.

ಅನೇಕ ದೈವಭಕ್ತರು ತಮಗೆ ಪ್ರಬಲವಾದ ಅನೇಕ ರೋಗಗಳನ್ನು ದ್ರವ್ಯ ದಾರಿದ್ರ್ಯವನ್ನು, ಮಕ್ಕಳಾಗದೆ ಇರುವುದನ್ನು, ಇಷ್ಟಾರ್ಥಗಳು ನೆರವೇರದೇ ಇರುವದನ್ನು; ನವಗ್ರಹ ಸೇವಾ, ಧರ್ಮಸ್ಥಳದಲ್ಲಿ ನೆಲೆಸಿರುವ ಮಂಜುನಾಥ ಹಾಗೂ ಸುಬ್ರಹ್ಮಣ್ಯದ ಸುಬ್ರಹ್ಮಣ್ಯನ ಸೇವಾ, ರಾಮೇಶ್ವರಯಾತ್ರೆ, ನಂಜುಂಡೇಶ್ವರನ ಸೇವಾ, ಘಟಿಕಾಚಲದಲ್ಲಿ ಭೂತಪ್ರೇತಗಳ ನಿವೃತ್ತಿಗೋಸ್ಕರ ಅಂಜನೇಯ ನರಸಿಂಹದೇವರ ಸೇವಾ, ತಿರುಪತಿ ಶ್ರೀನಿವಾಸನ ಸೇವಾ ಇವುಗಳದ್ವಾರ ಪರಿಹಾರ ಮಾಡಿಕೊಳ್ಳುತ್ತಾ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುತ್ತಿದ್ದಾರೆ. ಇವುಗಳನ್ನು ಗಮನಿಸಿದಾಗಜೀವರು ನಿತ್ಯವೆಂದೂ, ಅತೀಂದ್ರಿಯ ವಸ್ತುಗಳು ಇವೆ ಎಂಬುದೂ ಅನುಭವಾರೂಢವಾಗುತ್ತವೆ.

## ಆ) ದೇವರ ಅಸ್ತಿತ್ವ ಮತ್ತು ಪ್ರಭುತ್ವ ಸಮರ್ಥನೆ:

ನಮ್ಮ ಶರೀರದ ನಿರ್ಮಾಣ ಪರಿಸ್ಥಿತಿಯನ್ನು ಪರಿಶೀಲಿಸಿದರೂ ಅದು ಒಂದು ವಿಲಕ್ಷಣ ಯಂತ್ರದಂತೆ ಇರುವಾಗ ಕೇವಲ ಜಡಪ್ರಕೃತಿಯಿಂದಲೇ ಅದರ ನಿರ್ಮಾಣವಾಗುವುದು ಸಾಧ್ಯವಿಲ್ಲವೆಂದೂ, ಅದು ಯಾವುದೋ ಒಬ್ಬ ಚೇತನನ ಬುದ್ಧಿಪೂರ್ವಕವಾದ ರಚನೆಯೇ ಎಂದು ತಿಳಿಯಬೇಕಾಗಿದೆ. ವಟಬೀಜಕ್ಕೆ ಭೂಮಿ ಮತ್ತು ನೀರಿನ ಸಂಬಂಧವಾದಾಗ ಅಂಕುರೋತ್ಪತ್ತಿ ಕಂಡುಬರುತ್ತಿದೆ, ಕಲ್ಲಿನ ಚೂರಿನಲ್ಲಿ ಕಂಡು ಬರುತ್ತಿಲ್ಲ, ಆದ್ದರಿಂದ ಅಂತಹ ಒಂದು ಅತೀಂದ್ರಿಯಶಕ್ತಿಯನ್ನು ವಟಬೀಜದಲ್ಲಿ ಒಪ್ಪಬೇಕಾಗಿದೆ. ಇದರಂತೆ ಲೋಕದಲ್ಲಿ ವೃಕ್ಷ, ಕ್ರಿಮಿ, ಕೀಟ, ಪಶು, ಪಕ್ಷಿ, ಮನುಷ್ಯರುಗಳ ಸೃಷ್ಟಿ ಕಂಡುಬರುತ್ತಿದೆ. ಆ ಸೃಷ್ಟಿಯನ್ನು ತಂದೆ ತಾಯಿಗಳಾಗಲೀ, ಮತ್ತೆ

ಯಾರೇ ಆಗಲಿ ಮಾಡಿಲ್ಲವೆಂಬುದು ಸಿದ್ಧವಾಗುತ್ತಿರುವಾಗ ಆ ಕಾರ್ಯಗಳು ಯಾವನೋ ಒಬ್ಬ ಕರ್ತನನ್ನು ಬಯಸುತ್ತವೆ. ನಮ್ಮ ಅಂಗೈನ ರೇಖೆಗಳು, ಹುಟ್ಟಿದ ಘಳಿಗೆಯಂತೆ ಬರೆದ ಜಾತಕ, ಪಂಚಾಂಗದಂತೆ ತಾತ್ಕಾಲಿಕ ಗ್ರಹಗತಿಗಳು, ಈ ಮೂರೂ ಹೊಂದಿಕೊಂಡಿರುವದೆಂಬುದನ್ನು ಗಮನಿಸಿದಾಗಲೂ, ನಮ್ಮ ಶರೀರದ ನಿರ್ಮಾಣ ಯಾರೋ ಒಬ್ಬ ಸರ್ವಜ್ಞನಾದ, ಸರ್ವಶಕ್ತನಾದ ಚೇತನನಿಂದ ಮನಃಪೂರ್ವಕವಾಗಿ ರಚಿಸಲ್ಪಟ್ಟಿದೆ ಎಂದು ತಳಿಯಬೇಕಾಗಿದೆ. (ಕೈಯಲ್ಲಿರುವ ರೇಖಾ, ಜನ್ಮಜಾತಕ, ಅಂತರಿಕ್ಷದಲ್ಲಿರುವ ತಾತ್ಕಾಲಿಕ ಗ್ರಹಗತಿಗಳು ಕ್ರಮವಾಗಿ wrist watch, pocket watch, tower clock ಗಳನ್ನು ಹೋಲುತ್ತಾ ಮೂರೂ ಒಂದೇ ಅಭಿಪ್ರಾಯವನ್ನು ಕೊಡುತ್ತವೆ.) ಆ ಕರ್ತ ಯಾರು? ಎಂಬುದನ್ನು ತಿಳಿಸುವದಕ್ಕಾಗಿಯೇ, ವೇದ, ವೇದಾಂತ ಶಾಸ್ತ್ರಗಳು ಪ್ರವೃತ್ತವಾಗಿದೆ. ಅವನನ್ನೇ ಪರಮಾತ್ಮನೆಂದು ಆತನು ಪಕ್ಷಪಾತಾದಿದೋಷ ಇಲ್ಲದವನೆಂದು ಶಾಸ್ತ್ರಗಳು ತಿಳಿಸುತ್ತಿವೆ. ಪಕ್ಷ ಪಾತವಿಲ್ಲದ ಆ ದೇವರು ಅವರವರ ಕರ್ಮಾನುಸಾರ ಉಚ್ಚ ನೀಚ ಜನ್ಮಗಳನ್ನು (84 ಲಕ್ಷ ಯೋನಿಗಳಲ್ಲಿ ಜನ್ಮವನ್ನು ) ಕೊಡುವನೆಂಬುದಕ್ಕೆ ಕೆಲವು ದೃಷ್ಟಾಂತಗಳನ್ನು ಕೊಡುತ್ತೇವೆ-

1 ) ಅಷ್ಟವಸುಗಳ ಪೈಕಿ ಒಬ್ಬರಾದ ದ್ಯುನಾಮಕ ವಸುವು. ವರಾಂಗಿ ಎಂಬ ತಮ್ಮ ಪತ್ನಿಯ ಮಾತಿಗೆ ವಶರಾಗಿ, ವಸಿಷ್ಠ ಋಷಿಗಳಲ್ಲಿದ್ದ ಕಾಮಧೇನುವಂಶದ ಹಸುವಿನ ಹಾಲನ್ನು (ಅಮೃತವನ್ನು ) ಕಳ್ಳತನದಿಂದ ಕರೆಯುವುದಕ್ಕೆ ಹೋಗಿದ್ದಾಗ ಶಾಪಹೊಂದಿ, ಭೂಮಿಯಲ್ಲಿ ಶಂತನುವಿನ ಮಗನಾಗಿ ದೇವವ್ರತ ಎಂಬ ಹೆಸರನ್ನು ಹೊಂದಿ ಮುಂದೆ 'ಭೀಷ್ಮ' ರೆಂಬ ಹೆಸರನ್ನು ಪಡೆದು ಅನೇಕ ಶತಮಾನಗಳ ಕಾಲ (800 ವರ್ಷ) ಇರಬೇಕಾಯಿತು. ಅನಂತರ ಶ್ರೀ ಕೃಷ್ಣನ ಅನುಗ್ರಹದಿಂದ ತಮ್ಮ ಮೂಲರೂಪವನ್ನು ಹೊಂದಿದರು.

2) ಯಮದೇವರು ಅಣಿಮಾಂಡ್ಯರಿಗೆ ಶೂಲಪ್ರಾಪ್ತಿಯಾದ ಕಾಲದಲ್ಲಿ ಅವರು ಅದಕ್ಕೆ ಕಾರಣವನ್ನು ಕೇಳಿದಾಗ '' ಬಾಲ್ಯದಲ್ಲಿ ಒಂದು ಕ್ರಿಮಿಗೆ ಮುಳ್ಳಿನಿಂದ ಚುಚ್ಚಿದ್ದರಿಂದ

ಶೂಲಪ್ರಾಪ್ತಿ'' ಎಂದು ಹೇಳಿದರು. ಋಷಿಗಳು ಹಿಂದಿನ ನೂರು ಜನ್ಮವನ್ನು ಶೋಧಿಸಿ ಕೊಂಡು, 'ಹಾಗೆ ನಡೆದಿಲ್ಲದಿದ್ದರೂ ಸುಳ್ಳು ಹೇಳಿದುದರಿಂದ ಶೂದ್ರನಾಗು ' ಎಂದು ಶಾಪನೀಡಿದರು. ಅವರೇ ವಿದುರನಾಗಿ ಜನಿಸಿದ್ದು ಪ್ರಸಿದ್ಧಿ ಇದೆ.

3) ಸುಮುಖನೆಂಬ ಬ್ರಹ್ಮದೇವರ ಸೇವಕನು ಪೂಜಾಕಾಲಕ್ಕೆ ಹೂವು ತಂದುಕೊಡುವುದಕ್ಕೆ ತಡಮಾಡಿದ್ದರಿಂದ ಶಪ್ತನಾಗಿ ದೈತ್ಯಕುದಲ್ಲಿ ಪ್ರಲ್ಹಾದನಾಗಿ ಜನಿಸಬೇಕಾಯಿತು.

4 )ನೃಗ ಚಕ್ರವರ್ತಿಯು ನಿತ್ಯ ಗೋದಾನ ಮಾಡುವ ಸಂದರ್ಭದಲ್ಲಿ, ಒಂದು ಗೋವು ದಾನ ತೆಗೆದುಕೊಂಡ ಬ್ರಾಹ್ಮಣನನ್ನು ಬಿಟ್ಟು ಮಂದೆಗೆ ಬಂದು ಸೇರಿತು. ಅದರ ಜ್ಞಾನವಿಲ್ಲದ ಚಕ್ರವರ್ತಿಯು ಆ ಗೋವನ್ನು ಮರುದಿವಿಸ ಮತ್ತೊಬ್ಬ ಬ್ರಾಹ್ಮಣನಿಗೆ ದಾನ ಮಾಡಿದನು. ಅಜ್ಞಾನದಿಂದ ನಡೆದ ದತ್ತಾಪಹಾರದೋಷದಿಂದ ಅವನು ಕೃಕಲಾಸ (ಹೆಂಟೆಗೊದ್ದ) ನಾಗಬೇಕಾಯಿತು.

5)ಸುದರ್ಶನೆಂಬ ವಿದ್ಯಾಧರನು ಬ್ರಹ್ಮಜ್ಞಾನಿಗಳಾದ ಋಷಿಗಳನ್ನು ಹಾಸ್ಯ ಮಾಡಿದುದರಿಂದ ಅಜಗರ( ಹೆಬ್ಬಾವು) ನಾಗಬೇಕಾಯಿತು.

6) ಹಾಹಾ ಹೂಹೂ ಗಂಧರ್ವರು ಆನೆ ಮೊಸಳೆ ರೂಪದಿಂದ ದೇವಲ ಋಷಿಗಳನ್ನು ಭಯಪಡಿಸಿದ್ದರಿಂದ ಸಾವಿರಾರು ವರ್ಷ ಆನೆ ಮೊಸಳೆ ಜನ್ಮವನ್ನು ತಾವೇ ಅನುಭವಿಸಬೇಕಾಯಿತು.

7)ಇಂದ್ರದ್ಯುಮ್ನ ಮಹಾರಾಜರನು ದೇವರ ಪೂಜೆ ಮಾಡುತ್ತಿರುವಾಗ ಬಂದ ಅಗಸ್ತ್ಯಋಷಿಗಳಿಗೆ ಮರ್ಯಾದೆ ಮಾಡಲಿಲ್ಲವಾದ್ದರಿಂದ ಆನೆ ಜನ್ಮ ಅನುಭವಿಸಬೇಕಾಯಿತು.

8)ದಿಕ್ಪಾಲಕನಾದ ಕುಬೇರನ ಮಕ್ಕಳಾದ ನಳಕೂಬರ, ಮಣಿಗ್ರೀವರು ನಾರದರಿಗೆ ಅವಮಾನಕರವಾಗಿ ವರ್ತಿಸಿದ್ದರಿಂದ ಅರ್ಜುನವೃಕ್ಷಗಳಾಗಿ ಹುಟ್ಟಬೇಕಾಯಿತು.

9) ಓರ್ವ ಬ್ರಾಹ್ಮಣ ಸ್ತ್ರೀಯು (ಬಾಲರಂಡಾ ) ವ್ರತೋಪವಾಸಗಳಿಂದ ಬಹುಕಾಲ ಕಳೆದಿದ್ದರೂ ಮರಣ ಕಾಲದಲ್ಲಿ ಆಕೆಯನ್ನು ಜಗಲಿಯ ಮೇಲೆ ಮಲಗಿಸುವುದಕ್ಕೋಸ್ಕರ, ಬ್ರಾಹ್ಮಣರು ಹಾಸಿಗೆಸಮೇತ ಆಕೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ, ಆಕೆಗೆ ಒಬ್ಬಪುರುಷನ ಕೈತಗಲಿದಾಗ, ಪುರುಷಸ್ಪರ್ಶದಿಂದ ಎಂತಹ ಸುಖವಾಗುತ್ತದೆ ಎಂಬ ಭಾವನೆಯನ್ನು ಮನಸ್ಸಿಗೆ ತಂದುಕೊಂಡು ನಾಲ್ಕಾರು ಜನ ಪರುಷರನ್ನು ನೋಡುತ್ತಾ ಮರಣ ಹೊಂದಿದುದರಿಂದ, 'ಪಿಂಗಳಾ ' ಎಂಬ ವೇಶ್ಯಾಜನ್ಮವನ್ನು ಅನುಭವಿಸಬೇಕಾಯಿತು.

10) ಇಕ್ಷ್ವಾಕು ಮಹಾರಾಜನು ಯಜ್ಞಮಾಡುತ್ತಾ ಪುಷ್ಕಳ ಅನ್ನದಾನ ಮಾಡುತ್ತಿದ್ದರೂ, ನೀರನ್ನು ದಾನಮಾಡದ ಪ್ರಯುಕ್ತ ಹಲ್ಲಿಜನ್ಮವನ್ನು ಅನುಭವಸಬೇಕಾಯಿತು.

11)ಒಬ್ಬ ಶೂದ್ರರಾಜನು ತನ್ನ ಕಡುಲೋಭಿತನದಿಂದ ಕ್ರಿಮಿಜನ್ಮವನ್ನು ಹೊಂದಿದನು. ದೇವರ ಭಕ್ತನಾದ ಆತನು ವೇದವ್ಯಾಸರ ಅನಗ್ರಹದಿಂದ ಮುಂದಿನ ಜನ್ಮದಲ್ಲಿ ಬ್ರಾಹ್ಮಣನಾದನು.

12) ಶಂಬುಕನೆಂಬ ಕಾಶೀಪಟ್ಟಣದಲ್ಲಿ ಕಟ್ಟಿಗೆಮಾರುವ ಶೂದ್ರನು ಸೂರ್ಯಗ್ರಹಣ ಕಾಲದಲ್ಲಿ ತನ್ನ ಸರ್ವಸ್ವವನ್ನು (ಕೊಡಲಿ, ಕಟ್ಟಿಗೆ ದ್ರವ್ಯವನ್ನು ) ಬ್ರಾಹ್ಮಣನಿಗೆ ದಾನಮಾಡಿದ ಪುಣ್ಯದಿಂದ ಕಪಿಲ ಎಂಬ ಬ್ರಾಹ್ಮಣನ ಮಗನಾಗಿ ಅವರ ತಂದೆ ಸಂಪಾದಿಸಿದ್ದ ಅಗಾಧವಾದ ದ್ರವ್ಯಕ್ಕೆ ಅಧಿಪತಿಯಾದನು.

13)ಕಶ್ಯಪರು, ಮಗನಾದ ವರುಣನಿಗೆ ಬ್ರಹ್ಮದೇವರಿಂದ ಕೊಡಲ್ಪಟ್ಟ ಗೋವುಗಳನ್ನು

ಅಪಹಾರಮಾಡಿದ್ದರಿಂದ 'ವಸುದೇವ' ಎಂಬ ಹೆಸರಿನಿಂದ ಯದುಕುಲದಲ್ಲಿ ಹುಟ್ಟಬೇಕಾಯಿತು.

14) ಇಂದ್ರದೇವರು ಶುಷ್ಕತರ್ಕವನ್ನು ಹಿಡಿದು ಹೆಚ್ಚಿಗೆ ವಾದಮಾಡಿದ್ದರಿಂದ ನರಿಜನ್ಮ ಅನುಭವಿಸಬೇಕಾಯಿತೆಂದು ಅವರೇ ಹೇಳಿಕೊಂಡಿದ್ದಾರೆ.

15)ಮುಚುಕುಂದ ಮಹಾರಾಜನು ಮುಂದಿನ ಜನ್ಮದಲ್ಲಿ ಬ್ರಾಹ್ಮಣಜನ್ಮ ಹೊಂದಿದರೆಂಬುದಕ್ಕೆ ಶ್ರೀ ಕೃಷ್ಣನ ವಚನವಿದೆ.

16)ಋಷಭನಾಮಕ ಪರಮಾತ್ಮನ ಮಕ್ಕಳಾದ ಭರತಮಹಾರಾಜರು ರಾಜ್ಯಕೊಶಾಧಿಗಳನ್ನು ತ್ಯಾಗಮಾಡಿ ತಪಸ್ಸಿಗೆ ಕಾಡಿಗೆ ಹೋದಾಗ ಅನಾಥವಾದ ಒಂದು ಜಿಂಕೆಮರಿಯನ್ನು ರಕ್ಷಿಸುವ ಯೋಗ ಒದಗಿತು. ಮರಣಕಾಲದಲ್ಲಿ ಅದನ್ನೇ ಚಿಂತಿಸುತ್ತಾ ದೇಹಬಿಟ್ಟದ್ದರಿಂದ ತಾವೇ ಜಿಂಕೆಯ ಜನ್ಮವನ್ನು ಕೆಲವು ಕಾಲ ಅನುಭವಿಸಿ ನಂತರ ಅಂಗೀರಸಕುಲದಲ್ಲಿ ಬ್ರಾಹ್ಮಣನಾಗಿ ಜನಿಸಿದರು.

17) ಧ್ರುವಮಹಾರಾಜನು ಹಿಂದಿನ ಜನ್ಮದಲ್ಲಿ ಒಬ್ಬ ಬ್ರಾಹ್ಮಣಕುಮಾರನಾಗಿದ್ದಾಗ, ಆನೆಮೇಲೆ ಸವಾರಿಹೋಗುತ್ತಿವ ಒರ್ವ ರಾಜಕುಮಾರನನ್ನು ನೋಡಿ ತಾನೂ ಹಾಗೆಯೇ ಹೋಗಬೇಕೆಂಬ ಆಸೆಯಿಂದ ಮರಣಹೊಂದಿ ಮುಂದೆ ಉತ್ತಾನಪಾದ ಎಂಬ ರಾಜನ ಕುಮಾರನಾಗಿ ಜನಿಸಿದನು.

18) ಉಪಬರ್ಹಣ ಎಂಬ ಗಂಧರ್ವನು ಸ್ತ್ರೀಯರ ಮಧ್ಯದಲ್ಲಿ ಗಾನಮಾಡಿದ್ದರಿಂದ ಶೂದ್ರಕುಮಾರನಾಗಬೇಕಾಯಿತು. ಆಗ ಸಂನ್ಯಾಸಿಗಳ ಸೇವೆ ದೊರಕಿ ಅವರ ಪೊದೇಶದಿಂದ ಶ್ರೀಹರಿಯನ್ನು ಚಿಂತಿಸಿ ಮುಂದೆ ಬ್ರಹ್ಮದೇವರ ಮಗನಾಗಿ ನಾರದರೆನಿಸಿದರು.

19)ದುಂದುಕಾರಿ ಎಂಬ ಬ್ರಾಹ್ಮಣಕುಮಾರನು ವೇಶ್ಯಾಗಾಮಿಯಾಗಿ ರಾಜಮಂದಿರಗಳಲ್ಲಿ ಕಳ್ಳತನವನ್ನು ಮಾಡುತ್ತಿದ್ದು ವೇಶ್ಯಾಸ್ತ್ರೀಯರಿಂದ ಹತನಾಗಿ ಪಿಶಾಚಿಜನ್ಮವನ್ನು ಹೊಂದಿದನು. ನಂತರ ತನ್ನ ಅಣ್ಣನಾದ ಗೋಕರ್ಣನು ಶ್ರೀಮದ್ಭಾಗವತ ಸಪ್ತಾಹ ಹೇಳಿದ್ದನ್ನು ಕೇಳಿ ಪಿಶಾಚಿ ಜನ್ಮವನ್ನು ಕಳೆದುಕೊಂಡು ಸ್ವರ್ಗವನ್ನು ಹೊಂದಿದನೆಂದು ಪದ್ಮಪುರಾಣದಲ್ಲಿದೆ.

20) ಒಬ್ಬ ಬ್ರಾಹ್ಮಣಸ್ತ್ರೀಯು ಬಹಿಷ್ಠಳಾದಾಗ ಮೈಲಿಗೆ ಬೆರೆಕೆ ಹಾಕಿದಪ್ರಯುಕ್ತ ನಾಯಿಜನ್ಮವನ್ನು ಹೊಂದಬೇಕಾಯಿತು. ಅವಳ ಸಂಬಂಧದಿಂದ ಅವಳ ಗಂಡನು ಎತ್ತಿನ ಜನ್ಮ ಅನುಭವಿಸ ಬೇಕಾಯಿತು.

21)ವಿದ್ಯಾದಾನಮಾಡದೇ ಇದ್ದ ಒಬ್ಬ ಪಂಡಿತನು ಹುಳುಕುಮಾವಿನ ಮರವಾಗಿ ಹುಟ್ಟಿದನು (ಸ್ಕಾಂದ ಪುರಾಣ )

22) ನಹುಷನು ಇಂದ್ರಾಣಿಯನ್ನು ಬಯಸಿ ಅಜಗರನಾದನು.

23)ಕಲಿಯ ಹೆಂಡತಿಯಾದ ಅಲಕ್ಷ್ಮಿಯು ಬಹುಕಾಲ ತಪಸು ಮಾಡಿ ‘ದುಂದುಭಿ’ ಎಂಬ ಅಪ್ಸರಾಸ್ತ್ರೀಯಳಾದಳು. ನಂತರ ಅವಳೇ ಮಂಥರಾ ಎಂಬ ಕೈಕೇಯಿಯ ದಾಸಿಯಾದಳು.

24)ದಿಕ್ಪಾಲಕನಾದ ಕುಬೇರನು ನರಕಾಸುರನ ಮಗನಾಗಿ ಭಗದತ್ತ ಎಂಬ ಹೆಸರಿನಿಂದ ಹುಟ್ಟಿದನು.

25) ನಿರ್ಋತಿ ಎಂಬ ದಿಕ್ಪಾಲಕನು ಭೀಮಸೇನನಿಂದ ಹಿಡಿಂಬೆ ಎಂಬ ರಾಕ್ಷಸ ಸ್ತ್ರೀಯಲ್ಲಿ ಘಟೋತ್ಕಚನೆಂದು ಹುಟ್ಟಿದನು

ಇಂತಹ ದೃಷ್ಟಾಂತಗಳನ್ನು ಲೆಕ್ಕವಿಲ್ಲದಷ್ಟು ಕೊಡಬಹುದು. ಇವುಗಳಿಂದ ಪರಮಾತ್ಮನು ಪಕ್ಷ ಪಾತಾದಿದೋಷರಹಿತನೆಂದು, ಅಪರಾಧ ಮಾಡಿದವರು ಯಾರೇ ಆದರೂ ಅವರಿಗೆ ಕಠಿಣ ಶಿಕ್ಷೆ ಕೊಡುವನೆಂದು, ಪುನಃ ಅವರು ಧರ್ಮಿಷ್ಠರಾಗಿ ಶರಣಾಗತರಾದರೆ ಅವರನ್ನು ಕಾಪಾಡದೇ ಬಿಡಲಾರನೆಂದು ತಿಳಿದುಬರುತ್ತದೆ.

ಈ ಸಮಸ್ತ ಜಗತ್ತಿಗೂ ಕಾರಣನಾದ ಆ ದೇವರು ಒಬ್ಬನೇ ಎಂದು ಪ್ರಾಯಃ ಯಲ್ಲರೂ ಒಪ್ಪುತ್ತಾರೆ. ಅವನೇ ಶ್ರೀಕೃಷ್ಣನೆಂದು ತಿಳಿದುಬರುತ್ತಿದೆ. ಅವನ ಮಹಿಮೆಗಳು ಶಾಸ್ತ್ರದಲ್ಲಿ ಹೀಗೆ ವರ್ಣಿಸಲ್ಪಟ್ಟಿವೆ. ಸೃಷ್ಟಿಗೆಪ್ರಾರಂಭದಲ್ಲಿ ಸರ್ವತಂತ್ರಸ್ವತಂತ್ರನೂ, ಸರ್ವಜ್ಞನೂ, ಸರ್ವಶಕ್ತನೂ, ಸರ್ವಕರ್ತನೂ, ಪಕ್ಷಪಾತಾದಿಸಕಲದೋಷರಹಿತನೂ, ಅತೀಮನೋಹರಾಂಗನೂ, ಜ್ಞಾನಾನಂದಾದಿಗುಣಾತ್ಮಕವಾದ ಶರೀರವುಳ್ಳವನೂ, ಅನಂತಶಿರಪಾದಾದಿ ಅವಯವಗಳಿಂದ ಕೂಡಿದವನೂ ಆದ ದೇವರು ಕತ್ತಲೆಯಿಂದ ಆವೃತವಾದ ನೀರಿನ ಮಧ್ಯದಲ್ಲಿ ಒಂದು ಆಲದವೃಕ್ಷದ ಈಶಾನ್ಯಶಾಖೆಯ ಒಂದು ಎಲೆಯ ಮೇಲೆ ಶಿಶುರೂಪದಿಂದ ತನ್ನ ದೇಹ ಕಾಂತಿಯಿಂದ ಸುತ್ತಲೂ ಬೆಳಗುತ್ತಾ ಪವಡಿಸಿದ್ದನು. ಅವನ ಉದರದಲ್ಲಿ ಅವನಂತೆ ಅನಾದಿನಿತ್ಯವಾದ ಸತ್ವ. ರಜಸ್, ತಮೋಗುಣಗಳೆಂಬ ಪ್ರಭೇದಗಳಿಂದ ಕೂಡಿರುವ ಮೂಲಪ್ರಕೃತಿಯೂ, ಮುಕ್ತಾಮುಕ್ತರಾದ ಅಸಂಖ್ಯವಾದ ಜೀವರುಗಳೂ ಇರುತ್ತಾರೆ. ಜೀವರು ಎಂದಿನಂತೆ ಇದ್ದಾರೋ ಅಂದಿನಿಂದಲೂ ಧಾನ್ಯಗಳು ಹೊಟ್ಟಿನಿಂದ ಕೂಡಿರುವಂತೆ ಲಿಂಗಶರೀರದಿಂದ ಕೂಡಿರುತ್ತಾರೆ. ಹೊಟ್ಟಿರುವವರೆಗೂ ಭೂ, ನೀರಿನ ಸಂಬಂಧದಿಂದ ಧಾನ್ಯಗಳು ಗಿಡವಾಗಿ ಹುಟ್ಟುತ್ತಿರುವಂತೆ, ಜೀವರುಗಳು ಲಿಂಗಶರೀರ ಇರುವವರೆಗೂ ಅವರ ಕರ್ಮಾನುಸಾರ ಉಚ್ಚನೀಚ ಜನ್ಮಗಳನ್ನು ಹೊಂದಬೇಕಾಗಿ ಬರುತ್ತದೆ. ಹಾಗೆ ಹುಟ್ಟುತ್ತಾ ಇರುವವರೆಗೂ ಯಾವ ತರಹದ ಜನ್ಮಬಂದರೂ ದುಃಖಕರವಾಗಿಯೇ (life is great struggle ಎಂಬಂತೆ) ಇರುತ್ತದೆ. ಜನ್ಮ ಬೇಡ ಎಂಬುವರು ದೇವರ ಮುಖ್ಯ ಅನುಗ್ರಹಕ್ಕೆ ಪಾತ್ರರಾಗಿ ಲಿಂಗಶರೀರಸಂಬಂಧ ಬಿಡಿಸಿಕೊಂಡು ಮೋಕ್ಷವನ್ನು ಹೊಂದಿ ಶಾಶ್ವತ ಸುಖಪಡಬಹುದು. ಆ ಮೋಕ್ಷಕ್ಕೆ

ಕಾರಣವಾದ ದೇವರ ಅನುಗ್ರಹ ಸಂಪಾದನೆ ಮಾಡುವುದಕ್ಕೋಸ್ಕರ ಪುಣ್ಯ ಕರ್ಮಗಳು, ಜ್ಞಾನಸಂಪಾದನೆ, ಭಕ್ತಿಸಂಪಾದನೆ ಮಾಡಲಿ ಎಂದಕದಕಾಗಿಯೂ ಅನಾದಿಕಾಲದಿಂದ ಅವರಿಗೆ ಅಂಟಿರುವ ಪ್ರಕೃತಿ, ಅದರ ಕಾರ್ಯವಾದ ಪ್ರಪಂಚದಲ್ಲಿ ಅವರಿಗೆ ಆ ಪ್ರಕೃತಿಸಂಭಂಧದಿಂದ ಆಗುವ ದುಃಖವನ್ನು ಅನುಭವಕ್ಕೆ ತಂದುಕೊಟ್ಟು ಅದರಲ್ಲಿ ಪ್ರೇಮ ಬಿಡಿಸುವದಕ್ಕಾಗಿಯೂ ಪ್ರಕೃತಿಕಾರ್ಯವಾದ 24 ತತ್ವಗಳಿಂದ ನರ್ಮಾಣವಾದ ಈ ಸ್ಥೂಲ ಶರೀರಗಳನ್ನು ಕೊಡುತ್ತಿರುತ್ತಾನೆ. ವಿಷಯಗಳ ಸಂಬಂಧದಿಂದ ಎಷ್ಟೇ ದುಃಖವಾದರು. ಪುನಃ ಪುನಃ ವಿಷಯಗಳಲ್ಲಿ ಪ್ರೇಮ ಬರುವುದನ್ನು ಬಿಡಿಸಿಕೊಳ್ಳಲು ಶಕ್ಯವಿಲ್ಲ, ಇದೇ ದೇವರಿಂದ ನಿರ್ಮಿತವಾದ ‘‘ ಮಾಯಾಶಕ್ತಿ ’’ ಎನಿಸಿಕೊಳ್ಳುತ್ತದೆ ಈ ಪಾಶವನ್ನು ದೇವರ ಅನುಗ್ರಹದಿಂದಲೇ ಸುಲಭವಾಗಿ ಬಿಡಿಸಿಕೊಳ್ಳಬಹುದು. ಅಂತಹ ದೇವರ ಅನುಗ್ರಹವನ್ನು ಸಂಪಾದನೆ ಮಾಡುವ ಮಾರ್ಗವನ್ನು ತಿಳಿಸುವದಕ್ಕಾಗಿಯೇ ದೇವರಿಂದ ವೇದ, ಶಾಸ್ತ್ರ ಇತಿಹಾಸ, ಆಗಮ, ಪುರಾಣ ಮೊದಲಾದ ಸಚ್ಛಾಸ್ತ್ರಗಳು ಹೊರಟಿವೆ.

ತನ್ನ ಆಜ್ಞೆಯಂತೆ ಮಾಡುವವರ ರಕ್ಷಣಾಭಾರವನ್ನು , ಆಜ್ಞಾಮೀರಿ ನಡೆಯುವವರಿಗೆ ಶಿಕ್ಷಾಕ್ರಮವನ್ನು ತಾನೇ ವಹಿಸಿಕೊಂಡಿರುತ್ತಾನೆ ಈ ಕಾರ್ಯಸಾಧನೆಗಾಗಿ ತಾನೇ ಲೀಲಾದಿಂದ ರಾಮಕೃಷ್ಣಾದಿ ಅನೇಕ ಅವತಾರಗಳನ್ನು ಮಾಡುತ್ತಾ, ಆ ಅನೇಕ ಅವತಾರಕಥೆಗಳನ್ನು ಕೇಳುವುದರಿಂದ ದೇವರ ಆ ಮಾಯಾಶಕ್ತಿಯನ್ನು ಮೀರುವ ಶಕ್ತಿಯನ್ನು ಹೊಂದಬಹುದು, ಮಾತ್ರವಲ್ಲದೇ ದೇವರ ಮಹಿಮಾಜ್ಞಾನ ವಿಶೇಷವಾಗಿ ತೋರಿ ವಿಶೇಷಭಕ್ತಿಯನ್ನು ಹೊಂದಬಹುದು. ಅಂತಹ ಭಕ್ತಿಯಿಂದಲೇ ದೇವರ ವಿಶೇಷ ಅನುಗ್ರಹಕ್ಕೆ ಪಾತ್ರರಾಗಿ ದೇವರ ದರ್ಶನವನ್ನು ಹೊಂದಿ ಇಹಲೋಕದ ಸುಖಸಮುದ್ರದಲ್ಲಿ ಮುಳುಗಬಹುದು.

ಹೀಗೆ ಕರುಣಾಸುಮುದ್ರನಾದ ದೇವರ ತನ್ನನ್ನು ಸುಲಭವಾಗಿಹೊಂದವ ಮಾರ್ಗವನ್ನು ತಿಳಿಸುವುದಕ್ಕೋಸ್ಕರ ಶಾಸ್ತ್ರಗಳಲ್ಲಿ ಯಾವ ಮಾರ್ಗವನ್ನು (ಕಾರ್ಯಗಳನ್ನು ) ತಿಳಿಸಿದ್ದಾನೋ ಅವುಗಳೇ ಸನಾತನ ಧರ್ಮಗಳೆಂದು

ಪ್ರಸಿದ್ಧವಾದವುಗಳ, ಹೀಗೆ ದೇವರಿಂದ ಕ್ಲೃಪ್ತವಾದ ಧರ್ಮಗಳು ಜೀವರ ಸುಖಕ್ಕೆ ಕಾರಣವಾದವುಗಳೇ ವಿನಹ ಸರ್ವಥಾ ದುಃಖಕ್ಕೆ ಕಾರಣವಾದವುಗಳಲ್ಲಾ. ತಾಯಿಯು ಮಕ್ಕಳಿಗೆ ಸಿಹಿಯಾದ ತಿಂಡಿ ಕೊಡುವುದಲ್ಲದೆ ಕಹಿಯಾದ ಔಷಧಿಯನ್ನು ಆ ಮಕ್ಕಳ ಕ್ಷೇಮಕ್ಕಾಗಿಯೇ ಕೊಡುತ್ತಾಳೆ. ಆದರೆ ವಿವೇಕವಿಲ್ಲದ ಮಕ್ಕಳುಗಳು ಆ ತಾಯಿಯನ್ನೇ ನಿಂದಾ ಮಾಡುತ್ತವೆ. ಹಾಗೆ ವಿವೇಕವಿಲ್ಲದ ಜನಗಳು ಸನಾತನ ಧರ್ಮಗಳು ತಮ್ಮ ದುಃಖಕ್ಕೆ ಕಾರಣವಾದದ್ದೆಂದು ತಿಳಿಯುತ್ತಾರೆ. ವಿವೇಕಿಗಳು ಅಂತಹವರ ಮಾತಿಗೆ ಸೋಲಬಾರದು. ದಯಾಸಮುದ್ರನಾದ ದೇವರು ಸೃಷ್ಟಿಮಾಡುವ ಸಂದರ್ಭದಲ್ಲಿ ಹುಟ್ಟುವಾಗಲೇ ಕೆಲವರನ್ನು ಧನಿಕರನ್ನಾಗಿಯೂ, ಕೆಲವರನ್ನು ದರಿದ್ರರನ್ನಾಗಿಯೂ, ಕೆಲವರನ್ನು ಅಂಗವಿಕಲರನ್ನಾಗಿಯೂ, ಮತ್ತು ರೋಗಿಗಳನ್ನಾಗಿಯೂ, ಬಲಿಷ್ಠರನ್ನಾಗಿಯೂ, ಕೆಲವರನ್ನು ಸುರೂಪಿಗಳನ್ನಾಗಿಯೂ, ಕೆಲವರನ್ನು ಕುರೂಪಿಗಳನ್ನಾಗಿಯೂ ಸೃಷ್ಟಿ ಮಾಡಿದ್ದಾನೆ. ದೇವರಿಗೆ ಪಕ್ಷಪಾತವಿಲ್ಲವಾದ್ದರಿಂದ ಈ ವಿಷಮಸೃಷ್ಟಿಗೆ ಕಾರಣವಾದ ಪುಣ್ಯಪಾಪಗಳು ಇದೆಯೆಂದು ಊಹಿಸಬೇಕಾಗಿದೆ. ಇದನ್ನೇ ಶಾಸ್ತ್ರವು ತಿಳಿಸುತ್ತದೆ. ಉಪವೇದವೆನಿಸುವ ಜೋತಿಷ್ಯಶಾಸ್ತ್ರವು, ಬುಧನಾಡಿ, ಶುಕ್ರನಾಡಿ, ಪಾರ್ವತೀಪರಮೇಶ್ವರಸಂವಾದರೂಪವಾದ ಕರ್ಮ ವಿಪಾಕಗ್ರಂಥವನ್ನೂ ನೋಡಿದಾಗ ಜೀವರುಗಳು ಆವರವರ ಕರ್ಮಾನುಸಾರ ಉಚ್ಚ ನೀಚಜಾತಿಗಳಲ್ಲಿ ಹುಟ್ಟುವರೆಂದು ತಿಳಿದು ಬರುತ್ತದೆ. ಅಲ್ಲದೇ ಜೀವರ ಹಿಂದನ ಜನ್ಮವನ್ನು, ಆ ಜನ್ಮದಲ್ಲಿ ನಡೆದ ಪಾಪವನ್ನು , ಆ ಪಾಪಕ್ಕೆ ಅನುಗುಣವಾಗಿ ಈಗ ಆನುಭವಿಸುತ್ತಿರುವ ರೋಗಾದಿ ಉಪದ್ರವವೇ ಮೊದಲಾದ ಅನಿಷ್ಟಗಳನ್ನು ತಿಳಿಸುವುದಲ್ಲದೇ ಅದರ ಪರಿಹಾರೋಪಾಯವನ್ನೂ ತಿಳಿಸುತ್ತಿವೆ. ಅದರಂತೆ ಮಾಡಿದಾಗ ಆ ಅನಿಷ್ಟದ ಪರಿಹಾರ ಕಂಡುಬುತ್ತಿರುವಾಗ ಆ ಎಲ್ಲಾ ಶಾಸ್ತ್ರಗಳಲ್ಲಿ ಪ್ರಾಮಾಣ್ಯಬುದ್ಧಿಯನ್ನು ಇಟ್ಟು ಅತೀಂದ್ರಿಯ ವಸ್ತುಗಳನ್ನು ಒಪ್ಪಬೇಕಾಗಿಯೇ ಬರುತ್ತದೆ. ಅತೀಂದ್ರಿಯವಸ್ತುಗಳೆನಿಸಿದ ಪುಣ್ಯ, ಪಾಪ, ಸ್ವರ್ಗ-ನರಕ, ದೇವರು, ಮುಕ್ತರು ಇವೇ ಮೊದಲಾದವುಗಳನ್ನು ನಾರದರೇ ಮೊದಲಾದ ಜ್ಞಾನಿಗಳು ಪ್ರತ್ಯಕ್ಷದಿಂದಲೇ ನೋಡಿರುವರು ಎಂಬುದಕ್ಕೆ ಶಾಸಾತ್ರಧಾರಗಲಿವೆ. ನಾವು ಕಣ್ಣಿನಿಂದ ನೋಡುವುದಕ್ಕೆ ಆಗದಿದ್ದರೂ ವಿಟಮಿನ್ ಎ,

ಬಿ, ಸಿ ಮೊದಲಾದದ್ದು ಇದೆ ಎಂದು ವಿಜ್ಞಾನಿಗಳು ಹೇಳುವುದನ್ನು ಹೇಗೆ ನಂಬಿ ವ್ಯವಹಾರ ಮಾಡುತ್ತೇವೋ ಹಾಗೆಯೇ ಪುಣ್ಯ ಪಾಪಗಳನ್ನು ನೋಡುವ ಶಕ್ತಿ ನಮಗೆ ಇಲ್ಲದಿದ್ದರೂ ಜ್ಞಾನಿಗಳ ಮಾತು ನಂಬಿ ಪುಣ್ಯಪಾಪಗಳ ವ್ಯವಹಾರ ಮಾಡಬೇಕಾಗುತ್ತದೆ. ನಾವು ಆಯುರ್ವೇದವನ್ನು ನಂಬಿ, ಯಾವ ಶಾಖಾವಸ್ತುಗ್ಗಳಿಂದ, ಹಣ್ಣುಗಳಿಂದ, ಮೂಲಿಕೆಗಳಿಂದ, ಬೇರುತೊಗಟೆಗಳಿಂದ, ಮೃಗಗಳ ಕೊಂಬು, ಆನೆಹಲ್ಲು ಮೊದಲಾದವುಗಳಿಂದ ಯಾವ ರೋಗಕ್ಕೆ ಯಾವ ತರಹ ಚಿಕಿತ್ಸಾ ಮಾಡಬೇಕೆಂದು ತಿಳಿದಕೊಂಡು, ಅದರ ಉಪಯೋಗವನ್ನು ಹೊಂದುತ್ತೇವಷ್ಟೇ. ಯಾರೂ ಮೇಲ್ಕಂಡ ಎಲ್ಲಾ ವಸ್ತುಗಳ ಎಲ್ಲಾ ಕಾರ್ಯವನ್ನು (effect)ಪ್ರಯೋಗ (experiment - test)ಮಾಡಿಯೇ ತಿಳಿಯಲು ಶಕ್ಯವಲ್ಲ.

ಇಂತಹ ವೈದ್ಯಶಾಸ್ತ್ರವು ಪ್ರಜಾಪತಿಯಿಂದ ಬಂದಿದೆಯೆಂದು ವೈದ್ಯರೂ ನಂಬುತ್ತಿದ್ದಾರೆ. ವೈದ್ಯಶಾಸ್ತ್ರ ಪ್ರವರ್ತಕನು ಸರ್ವಜ್ಞನೆಂದು, ಪ್ರಜಾಪತಿನಾಮಕ ಶಬ್ದವಾಚ್ಯನಾದ ದೇವರೆಂದೇ ತಿಳಿಯಬೇಕಾಗಿದೆ. ಮತ್ತೊಂದು ಉಪವೇದವಾದ ಧನುರ್ವೇದವನ್ನು ಉಪಯೋಗಿಸಿಕೊಂಡು ಹಿಂದನ ಕ್ಷತ್ರಿಯರು ಯುದ್ಧ ಮಾಡುವಾಗ ಉಪಯೋಗಿಸುತ್ತಿಂದ ಅಜ್ಞೇಯಾಸ್ತ್ರಾದಿಗಳನ್ನು ಜ್ಞಾಪಿಸಿಕೊಂಡರೇ, ಧನುರ್ವೇದದಲ್ಲಿ ಉಪಯೋಗಿಸುವ ಮಂತ್ರಾಭಿಮಾನಿಗಳಾದ, ದೇವತಾರೂಪರಾದ ಅತೀಂದ್ರಿಯವಸ್ತುಗಳನ್ನು ನಂಬಬೇಕಾಗಿ ಬರುತ್ತದೆ. ರಾಗವಿಶೇಷದಿಂದ ಗಾನಮಾಡಿದಾಗ ಒಣಗಿದವೃಕ್ಷ ಚಿಗುರಿ ಪುಷ್ಪಫಲಭರಿತವಾಗುವುದನ್ನು, ಹಾಗಯೇ ಮಂತ್ರೋಚ್ಚಾರಣೆಯಿಂದ ಅಂಗೈಯಲ್ಲಿರುವ ಬೀಜವು ಮೊಳಕೆ ಮತ್ತು ಗಿಡವಾಗಿ ಫಲದಾಯಕವಾಗಿರುವುದನ್ನು ನಮ್ಮ ಹಿರಿಯರು ತಿಳಿಸಿದ್ದಾರೆ. ಇವುಗಳನ್ನು ಗಮನಿಸಿದರೆ ಗಾನವಿದ್ಯೆಯಿಂದ ಅಥರ್ವಣೀವಿದ್ಯಾ ಇವುಗಳಿಂದ ಅತೀಂದ್ರಿಯವಸ್ತುಗಳಲ್ಲಿ ನಂಬಿಕೆ ಬರುತ್ತದೆ. ಗ್ರಂಥಗೌರವಭಯದಿಂದ ಅವುಗಳನ್ನು ವಿವರಿಸುತ್ತಿಲ್ಲ.

60,000 ವರ್ಷಗಳಾದರೂ ಮಕ್ಕಳಾಗದೇ ಇರುವಾಗ ದಶರಥ

ಮಹಾರಾಜರು ಪುತ್ರಕಾಮೇಷ್ಟಿಯಾಗದಿಂದ ಮಕ್ಕಳನ್ನು ಪಡೆದಿರುವುದು ನಮ್ಮ ಹಿಂದಿನ ಚರಿತ್ರೆಯಿಂದ ಕಂಡುಬರುತ್ತಿರುವಾಗ, ಅದನ್ನು ನಂಬದವರು ಈಗಿನ ಚರಿತ್ರೆಯ್ನು ನಂಬುವುದಾದರೂ ಹೇಗೇ?

ವೇದಾಂಗಭೂತವಾದ ವ್ಯಾಕರಣಾದಿಗಳಲ್ಲೂ, ಪ್ರಾಮಾಣ್ಯಬುದ್ಧಿಯನ್ನು ಇಡಬೇಕಾದ ಅವಶ್ಯಕತೆ ಕಂಡುಬರುತ್ತಿದೆ. ವ್ಯಾಕರಣಶಾಸ್ತ್ರಕ್ಕೆ ವಿರುದ್ಧವಾದ ಅಪಶಬ್ದಗಳನ್ನು , ವಿಷಗಣಗಳಿಂದ ಕೂಡಿದ ಕಾವ್ಯರಚನೆಯನ್ನು ಮಾಡಿದಾಗ, ಆ ಕಾವ್ಯಕರ್ತನಿಗೂ ಅದನ್ನು ಪಠಿಸುವವರಿಗೂ ಅನಿಷ್ಟ ಆಗುವುದು ಕಂಡುಬರುತ್ತಿದೆ. ಅದರಂತೆ ಸದ್ದೇವತೆಗಳಿಂದ ಅಭಿಮನ್ಯವಾದ ಗಣದಿಂದ ಪ್ರಾರಂಭಿಸಲ್ಪಟ್ಟ ಗ್ರಂಥವನ್ನು ರಚನೆ ಮಾಡುವವರಿಗೂ, ಅದನ್ನು ಅಭ್ಯಾಸ ಮಾಡುವವರಿಗೂ ಧನಪ್ರಾಪ್ತ್ಯಾದಿಶ್ರೇಯಸ್ಸಾಗುವುದನ್ನು ಕಾಣಬಹುದಾಗಿದೆ. ಈ ಉದಾಹರಣೆಗಳಿಂದ ನಾಸ್ತಿಕವಾದವು ದೂರವಾಗಬೇಕಷ್ಟೇ. ವೇದಾಂಗಗಳು, ಉಪವೇದಗಳು ಯಥಾರ್ಥಜ್ಞಾನವನ್ನು ಹುಟ್ಟಿಸುತ್ತಿರುವುದು ಕಂಡುಬರುತ್ತಿರುವಾಗಲೂ, ಕಲಾವಿದ್ಯೆಗಳಿಂದ ನಾವು ಸುಖವನ್ನು ಪಡೆಯುತ್ತಿರುವಾಗಲೂ, ಮೂಲವಾದ ವೇದವಿದ್ಯೆಯು ಪ್ರಮಾಣವೆಂದೇ ನಂಬಬೇಕಷ್ಟೇ. ಪುಣ್ಯಪಾಪಗಳನ್ನು ನಂಬದಿದ್ದರೆ ಜನಗಳಲ್ಲಿ ಭಯ ತಪ್ಪಿಹೋಗಿ'might is right'ಎಂಬಂತೆ ಪರಸ್ಪರ ಹಿಂಸಾ ಪ್ರಾರಂಭವಾಗುತ್ತದೆ ಒಂದು ವೇಳೆ ಪುಣ್ಯಪಾಪಗಳು ಇಲ್ಲದೇ ಇದ್ದರೂ, ಅವುಗಳನ್ನು ನಂಬಿದರೆ ಪಾಪದ ಹೆದರಿಕೆಯಿಂದ ಲೋಕದಲ್ಲಿ ಪರಸ್ಪರ ಬಾಧೆ ತಪ್ಪಿ ಅನುಕೂಲವಾಗುತ್ತಿರುವಾಗ ಪುಣ್ಯಪಾಪಗಳನ್ನು ಏಕೆ ನಂಬಬಾರದು? ನಮ್ಮ ಪ್ರಾಚೀನರಾದ ಮಹರ್ಷಿಗಳೇ ಮೊದಲಾದವರು ದೇವರನ್ನು ಒಪ್ಪಿರುವುದರಿಂದಲೂ, ಹಿಂದೆ ಹೇಳಿದಂತೆ ನಮ್ಮ ಊಹೆಗೆ ವಿಚಿತ್ರಶಕ್ತಿಯುಳ್ಳ ಒಂದು ವಸ್ತು ಇದೆ ಎಂದು ತೋರುತ್ತಿರುವುದರಿಂದಲೂ, ಆಧುನಿಕವಿಜ್ಞಾನಶಾಸ್ತ್ರದಲ್ಲಿ ಪ್ರವೀಣರಾದವರು ನಮ್ಮ ಬುದ್ಧಿಗೆ ನಿಲುಕದ ಒಂದು ಅದ್ಭುತ ಶಕ್ತಿಯನ್ನು ಒಪ್ಪಬೇಕಾಗಿ ಬರುತ್ತದೆ ಎಂದು ಹೇಳುತ್ತಿರುವುದರಿಂದಲೂ; ವೇದಗಳು ಅದೇ ವಸ್ತುವನ್ನು ತಿಳಿಸಿಕೊಡುವುದರಿಂದಲೂ, ವಿವೇಕಿಗಳು ದೇವರೇ ಮೊದಲಾದ ಅತೀಂದ್ರಿಯ

ಪದಾರ್ಥಗಳು ಇವೆ ಎಂದು ನಂಬಲೇಬೇಕಾಗಿದೆ. ಅಂತಹ ದೇವರನ್ನು ನೋಡುತ್ತಿರುವ ಶುಕವಾಮದೇವಾದಿಮಹಾಜ್ಞಾನಿಗಳು ಈಗಲೂ ಇದ್ದಾರೆಂದು ಪರಸ್ಪರ ವಿರುದ್ಧಮತದವರೂ ಒಪ್ಪುತ್ತಿದ್ದಾರೆ. ಈ ಹಿಂದೆ ಹೇಳಿದ ಮೂರು ಪ್ರಮಾಣಗಳು ಆಪ್ತವಾಕ್ಯ, ಶ್ರುತಿ ಮತ್ತು ಯುಕ್ತಿ ಒಂದೊಂದು ದೇವರನ್ನು ತಿಳಿಸಿಕೊಡುತ್ತಿರುವಾಗ, ದೇವರೇ ಮೊದಲಾದ ಅತೀಂದ್ರಿಯವಸ್ತುಗಳನ್ನು ನೋಡುವ ಕ್ರಮವನ್ನು ಆಶ್ರಯಿಸದೆ, ಸುಮ್ಮನೆ ದೇವರು ಇಲ್ಲಾ ಎಂಬುದಾಗಿ ಹೇಳಿದರೆ, ವಿವೇಕಿಗಳು ನಂಬುವುದಾದರೂ ಹೇಗೆ? ವಿಜ್ಞಾನಿಗಳು ಹೇಳುವ ವಿಟಮಿನ್ ಎ,ಬಿ,ಸಿ,ಡಿ, ಮೊದಲಾದವುಗಳು ಇಲ್ಲಾ ಎಂಬುದಾಗಿ ಸುಮ್ಮನೆ ಹೇಳಿದರೆ (ಅಂದರೆ ವಿಜ್ಞಾನಿಗಳ ಪರೀಕ್ಷಾಕ್ರಮವನ್ನು ಅನುಸರಿಸದೇ ಹೇಳಿದರೆ) ಆಧುನಿಕರ್‍ಯಾರೂ ಹೇಗೆ ನಂಬುವುದಿಲ್ಲವೋ ಹಾಗೇ ನಮ್ಮ ಹಿರಿಯರು ಹೇಳುವ ಪರೀಕ್ಷಾಕ್ರಮವನ್ನು ಅನುಸರಿಸದೇ ಅತೀಂದ್ರಿಯವಸ್ತುಗಳು ಇಲ್ಲವೆಂದು ಹೇಳಿದರೆ, ವಿವೇಕಿಗಳು ಯಾರೂ ಆ ಮಾತಿಗೆ ಮಾರ್ಯಾದೆ ಮಾಡಬಾರದು.

## 5.. ವಿಜ್ಞಾನವಾದದ ಗುಣದೋಷಚಿಂತೆ:

ಆಸ್ತಿಕ ವಿಚಾರಸರಣಿ ಒಂದು ಕಡೆ ಇರಲಿ. ನಾವು ಈಗ ವಿಜ್ಞಾನಶಾಸ್ತ್ರವನ್ನು ಆಶ್ರಯಿಸಿ ಅನೇಕ ರೀತಿಯಿಂದ ಸುಖವನ್ನು ಒದಗಿಸಿಕೊಳ್ಳುತ್ತಿರುವಾಗ, ಅದನ್ನೇ ಅನುಸರಿಸಿ ಮುಂದುವರೆದರೆ ವಿಶೇಷಸುಖಕ್ಕೆ ಭಾಗಿಗಳಾಗಹುದಲ್ಲವೇ? ಎಂದು ಒಂದು ಭಾವನೆ ಬರಬಹುದು. ಅದನ್ನು ಈಗ ಸ್ವಲ್ಪ ವಿಮರ್ಶೆ ಮಾಡೋಣ. ವಿಜ್ಞಾನಶಾಸ್ತ್ರದವರು (chemicals ಇಂದ) (ರಾಸಾಯನಿಕ ಪದಾರ್ಥಗಳಿಂದ) ಅನೇಕ ಔಷಧಿಗಳನ್ನು ಕಂಡು ಹಿಡಿದಿದ್ದರೂ, ಅದು ಕಾಲಾಂತರದಲ್ಲಿ ರೋಗಾಂತರಕ್ಕೆ ಕಾರಣವಾಬುವುದೆಂದು ಅವರೇ ಅನೇಕ ಸಂದರ್ಭದಲ್ಲಿ ಒಪುವಪತ್ತಾರೆ. ಆ ಔಷಧಿ ಗಳುನಮ್ಮ ಆಯುರ್ವೇದ, ನಾಡು(native) ಔಷಧಿಗಳಿಗಿಂತ ಹೆಚ್ಚು ಬೆಲೆಯುಳ್ಳದ್ದಾಗಿವೆ. ಮತ್ತು ಆಯುರ್ವೇದ ಔಷಧಿಗಳಂತೆ ಸಮುಲವಾಗಿ ರೋಗಳನ್ನು ಪರಿಹಾಗ ಮಾಡಲಾರವು. ತತ್ಕಾಲದಲ್ಲಿರೋಗ ಪರಿಹಾರಮಾಡಿ ನಮ್ಮ ವೈದ್ಯದಲ್ಲಿ

ಅವಿಶ್ವಾಸವನ್ನು ಹುಟ್ಟಿಸಿ, ರೋಗವನ್ನೂ ಸರಿಯಾಗಿ ಪರಿಹಾರಮಾಡದೆ ಬೇರೆ ರೋಗಗಳಿಗೂ (side affects )ಕಾರಣವಾಗುತ್ತಿರುವುದರಿಂದ, ಒಂದು ಕಾಲದಲ್ಲಿ ಅದರಿಂದ ಮೋಸಹೋಗುವ ಸಂದರ್ಭವೂ ಉಂಟು ಎಂದರೆ ತಪ್ಪಾಗಲಾರದು. ಆನೇಕ ಸಂದರ್ಭದಲ್ಲಿ ಸುಲಭವಾಗಿ ಆಯುರ್ವೇದ ಔಷಧಿಯಿಂದ ಕರಗುವ ಗುಲ್ಮ ಮೊದಲಾದವುಗಳಿಗೆ ಕಠಿಣ ಶಸ್ತ್ರಚಿಕಿತ್ಸೆಯನ್ನು (operation) ಇಂಗ್ಲಿಷ್ ವೈದ್ಯರು ಹೇಳುತ್ತಾರೆ. ಇನ್ನು ಕುಟ್ಟುವ, ಬೀಸುವ, ರುಬ್ಬುವ (grinder mixer) ಯಂತ್ರಗಳಿಂದಲೂ, ಗಣಕಯಂತ್ರದಿಂದಲೂ (Calculator ) ನಾವು ಶ್ರಮಪಡದೇ ಕಾರ್ಯನಿರ್ವಾಹವಾಗುತ್ತಿರುವುದನ್ನು ಗಮನಿಸುವುದಾದರೆ, ಆ ಯಂತ್ರಗಳು ವಿದ್ಯುತ್‌ಶಕ್ತಿಯಿಂದ ಕೆಲಸ ಮಾಡುವುದರಿಂದ ಪದಾರ್ಥಗಳ ಸತ್ವವು ಬಹಳವಾಗಿ ನಷ್ಟವಾಗುತ್ತದೆ. ಮತ್ತು ಅವುಗಳ ನಮಗೆ ಶಾರೀರಬಲವನ್ನು , ಬುದ್ಧಿಶಕ್ತಿಯನ್ನು , ಪದಾರ್ಥದ ರುಚಿಯನ್ನೂ ಕಮ್ಮಿಮಾಡಿಸುತ್ತಿವೆ. ಆದ್ದರಿಂದ ಯಂತ್ರಗಳಿಂದ ನಮಗೆ ಒಂದು ರೀತಯ ಅಪಕಾರವೇ ಆಗುತ್ತಿದೆ. ದೂರದರ್ಶನ, ದೂರಶ್ರವಣಯಂತ್ರಗಳಿಂದ ನಾವು ಹಿಂದಿನವರಿಗಿಂತ ಈಗ ಹೆಚ್ಚಿನ ಸುಖಪಡುತ್ತಿದ್ದರೂ ಅದು ನಿರ್ದುಷ್ಟವಾದ ಯೋಗದ ಮಾರ್ಗಕ್ಕೆ ಅಡ್ಡಿತರುತ್ತಿದೆ. ಕೆಲವು ರಹಸ್ಯಕ್ಕೆ ಯೋಗ್ಯವಾದ ವಿಷಯಗಳು ಬಹಿರಂಗವಾಗುವ ಸಂದರ್ಭಗಳೂ ಉಂಟು. ರಾಸಾಯನಿಕ ಗೊಬ್ಬರ ಹಾಕಿ ತರಕಾರಿಗಳನ್ನು ಪುಷ್ಟವಾಗುವಂತೆ ಬೆಳೆಸಿದ್ದರೂ, ಅವು ಸತ್ವರಹಿತವಾಗಿ ರುಚಿಯೂ ಇಲ್ಲದೇ ಪುರಷನ ನಿಃಶಕ್ತಿಗೆ ಕಾರಣವಾಗುತ್ತಿವೆ. ಆಟಂಬಾಂಬು ಇವುಗಳ ತಯಾರಿಕೆಗೆಂದು ದ್ರವ್ಯ ಬಹಳ ವೆಚ್ಚವಾಗುತ್ತದೆ. ಉಪಯೋಗ ಇರುತ್ತದೆ . (ಅಂದರೆ ನಿತ್ಯೋಪಯೋಗಕ್ಕೆ ಬರುವುದಿಲ್ಲ.) ಅದೇ ಸಿಡಿದರೆ (explode ಆದರೆ) ಅಥವಾ ಪ್ರಯೋಗಿಸಲು ಹೋದರೆ (test/experiment ಮಾಡಲು ಹೋದರೆ) ಅನೇಕರ ಮರಣಕ್ಕೂ, ಅರೋಗ್ಯ ಕೆಡುವುದಕ್ಕೂ, ಮೂಂದಿನ ಜನಾಂಗದ ಅಂಗವಿಕಲತೆಗಳಿಗೂ, ದೇಶನಾಶಕ್ಕೂ ಕಾರಣವಾಗುವುದು ಕಂಡುಬರುತ್ತಿದೆ. ಸಣ್ಣಸಣ್ಣ ಆಟಂಬಾಂಬುಗಳನ್ನು ದುರ್ಜನರು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಅದರಿಂದ ಅನೇಕ ಸಜ್ಜನರಿಗೆ ತೊಂದರೆಯೂ

ಆಗುವ ಸಂಭವವುಂಟು. ಅವುಗಳ ತಯಾರಿಕೆಗೆ ಹೆಚ್ಚಿಗೆ ದ್ರವ್ಯ ಉಪಯೋಗಿಸುವ ಸಂದರ್ಭದಲ್ಲಿ, ಆ ದ್ರವ್ಯವನ್ನು ಪ್ರಜೆಗಳ ಮೇಲೆ ಹಾಕಿದರೆ ಪ್ರಜೆಗಳಿಗೆ ತೊಂದರೆಕೊಟ್ಟಂತೆ ಆಗುವುದಿಲ್ಲವೇ ! ವಿದ್ಯುಚ್ಛಕ್ತಿಯಿಂದ ನಾವು ಮುಂದುವರೆದು ಅನೇಕ ರೀತಿಯಾದ ಸೌಕರ್ಯಗಳನ್ನು ಒದಗಿಸಿ ಕೊಂಡು ಹೆಮ್ಮೆಪಡುತ್ತಾ ಪ್ರಾಚೀನರನ್ನು ತಿರಸ್ಕರಿಸುವುದು ಸರಿಯಲ್ಲ, ಆ ವಿದ್ಯುಚ್ಛಕ್ತಿಯು ದೊರಕದ ಸಂದರ್ಭದಲ್ಲಿನಮ್ಮ ಸ್ಥಿತಿ ಏನಾಗುವುದೆಂದು (think of the consiquences ) ಮುಂದಾಗಿ ಯೋಚಿಸಿದರೆ ನಮ್ಮ ಕಾರ್ಯಗಳೆಲ್ಲಾ ನಿಂತು ಹೋಗುವ ಸಂದರ್ಭ ಬರುವುದಲ್ಲದೇ ಮುಖ್ಯಜೀವನಪ್ರದ ಎಂದೆನಿಸುವ ನೀರೂ ದೊರಕದ ಸಂದರ್ಭವೊದಗಿ ಇಡೀ ಜನಾಂಗವೇ ಬಹುಸಂಕಟದಿಂದ ಸಾಯುವ ಸ್ಥಿತಿ ಬರುವುದರಲ್ಲಿ ಸಂದೇಹವಿಲ್ಲ. ವಿದ್ಯುಚ್ಛಕ್ತಿಯಿಲ್ಲದೆ. ರಾತ್ರಿಕಾಲದಲ್ಲೂ ಕತ್ತಲೆಯಿಂದ ತೊಂದರೆಪಡುವ ಸಂದರ್ಭದಲ್ಲಿ ಕಳ್ಳರೇ ಮೊದಲಾದವರು ಆ ಸ್ಥಿತಿಯನ್ನು ತಮಗೆ ಅನುಕೂಲವನ್ನಾಗಿ ಉಪಯೋಗಿಸಿಕೊಂಡು ಸಾಧುಜನರಿಗೆ ನಾನಾ ರೀತಿಯ ಬಾಧೆ ಉಂಟುಮಾಡುವುದಕ್ಕೂ ಅವಕಾಶ ಉಂಟು. ವಿದ್ಯುಚ್ಛಕ್ತಿಯ ಸಹಾಯದಿಂದ ನಾವು ಅನೇಕ ಯಂತ್ರಗಳಿಂದ ಕೆಲಸಮಾಡಿಸಿ ಕೊಳ್ಳುತ್ತಾ ಇರುವಾಗ ತತ್ಕಾಲದಲ್ಲಿ ನಮಗೆ ಆಯಾಸವಿಲ್ಲವಾದ್ದರಿಂದ ಸುಖ ತೋರಿದರೂ, ಆ ಕೆಲಸಗಳನ್ನು ನಾವೇ ಮಾಡುತ್ತಿದ್ದಾಗ ನಮ್ಮ ಅವಯವಗಳಿಗೆ ಆಗುತ್ತಿದ್ದ ವ್ಯಾಯಾಮಗಳು (exercise ) ತಪ್ಪಿಹೋಗಿ ಶರೀರದ ಬಲ ಕಮ್ಮಿ ಆಗುವುದಲ್ಲದೇ ಸ್ವತಃ ಕೆಲಸಮಾಡುವ ಅಭ್ಯಾಸ ತಪ್ಪಿ ಹೋಗುವುದರಿಂದ ಬುದ್ಧಿಕುಶಲತೆ ಹೆಚ್ಚುವುದಕ್ಕೆ ಅಡ್ಡಿಯೂ ಬರುತ್ತದೆ. ವಿದ್ಯಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿರುವಾಗ ನಮ್ಮ ಶರೀರಕ್ಕೆ ಉಷ್ಣಾಂಶ ಜಾಸ್ತಿ ಆಗಿ ಆರೋಗ್ಯ ಕೆಡುವುದಕ್ಕೂ ಅವಕಾಶ ಉಂಟು. ವಿದ್ಯುಚ್ಛಕ್ತಿಯ ಸಮೀಪದಲ್ಲಿರುವಾಗ ಸ್ವಲ್ಪ ಜಾಗರೂಕತೆ ತಪ್ಪಿದರೆ ಪ್ರಾಣಾಪಹಾರವೇ ಆಗುತ್ತದೆ. ಒಟ್ಟಿನಲ್ಲಿ ಯಂತ್ರವನ್ನು, ವಿದ್ಯುಚ್ಛಕ್ತಿಯನ್ನು ಜಾಗರೂಕರಾಗಿ ಉಪಯೋಗಿಸಿಕೊಂಡರೆ ಸ್ವಲ್ಪ ಅನುಕೂಲವನ್ನು ಹೋಂದಬಹುದಾದರೂ ಎಚ್ಚರಿಕೆ ತಪ್ಪಿದರೆ ಹೇಗೆ ಅದು ಪ್ರಾಣಾಪಹಾರಿಯೇ ಆಗುತ್ತದೋ ಹಾಗೆಯೇ ವಿಜ್ಞಾನಶಾಸ್ತ್ರದಲ್ಲಿ ಮುಂದುವರೆದು

ಹೋಗುತ್ತಿರುವಾಗ, ಆ ವಿಜ್ಞಾನಿಗಳೇ ಒಪ್ಪುವಂತೆ '' ನಮ್ಮ ಬುದ್ಧಿಗೆ ನಿಲುಕದ ಒಂದು ಮಹಾಶಕ್ತಿಯಿದೆ'' ಎಂದು ಒಪ್ಪಿದಾಗ, ಅದನ್ನು (ಮಹಾಶಕ್ತಿಯನ್ನು) ನಾವು ನಂಬದೇ ನಾಸ್ತಿಕ್ಯವಾದಕ್ಕೆ ಇಳಿದರೆ ಅಲ್ಪಸುಖಕ್ಕಾಗಿ ಮಹಾಸುಖವನ್ನು ಕಳೆದುಕೊಳ್ಳುವ ಯೋಗ ಬರುವುದರಲ್ಲಿ ಸಂದೇಹವೇ ಇಲ್ಲ! ಆದ್ದರಿಂದ ವಿವೇಕಿಗಳು ದೇವರಿಂದಲೂ, ದೇವರ ಭಕ್ತರಾದ ಮಹಾಜ್ಞಾನಿಗಳಿಂದಲೂ ರಚಿಸಲ್ಪಟ್ಟ ಗ್ರಂಥಗಳಿಗೆ ವಿರೋಧವಾಗದಂತೆ ಅರ್ಥಮಾಡಿಕೊಳ್ಳುವುದು ಉಚಿತವಾಗಿ ತೋರುತ್ತದೆ. ದೃಷ್ಟಾಂತವಾಗಿ ಹೇಳುವುದಾದರೆ ವಿಜ್ಞಾನಿಗಳು ಚಂದ್ರಮಂಡಲಕ್ಕೆ ಹೋಗಿ ಬಂದಿರುವುದನ್ನು ಯಂತ್ರಗಳ ದ್ವಾರಾ ತಿಳಿಸಿ ಜನಗಳಿಗೆ ನಂಬಿಕೆ ಹುಟ್ಟಿಸುತ್ತಿದ್ದಾರೆ. ಅದನ್ನೇ ಅತಿಯಾಗಿ ನಂಬಿ ನಮ್ಮ ಶಾಸ್ತ್ರಗಳನ್ನು ನಂಬದವರು, ಭೂಮಿಯು ನಮ್ಮ ವೈದಿಕಶಾಸ್ತ್ರ ಹೇಳುವಂತೆ ತಟ್ಟೆ ಆಕಾರ ಇರುವುದನ್ನು ನಂಬದೇ ಪಾಶ್ಚಾತ್ಯರು ಹೇಳುವಂತೆ ಕಿತ್ತಳೆ ಹಣ್ಣಿನಂತೆ ಇದೆಯೆಂದು ನಂಬಬೇಕಾಗಿ ಬರುತ್ತದೆ. ಅಷ್ಟು ಮಾತ್ರವಲ್ಲದೆ ಶಾಸ್ತ್ರದಂತೆ ಈ ಭೂಲೋಕದಲ್ಲೇ ಇರುವ ಅಮಾನುಷ ಸ್ಥಳಗಳನ್ನು ಲೋಕಾಂತರಗಳನ್ನು ನಂಬದೇ,ಅವುಗಳಿಂದ ಆಗುವ ಸುಖಗಳನ್ನು ಕಳೆದುಕೊಳ್ಳುವ ಕೆಟ್ಟಯೋಗಕ್ಕೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ. ಈ ಸಂದರ್ಭದಲ್ಲಿ ವಿಜ್ಞಾನಿಗಳು ಹೇಳುವ ಚಂದ್ರ ಮಂಡಲವು ಸೂರ್ಯಮಂಡಲಕ್ಕಿಂತ ಸಮೀಪದಲ್ಲಿದ್ದು ಅದು ಮೃಣ್ಮಯವಾದದ್ದೆಂದೂ ತಿಳಿದುಬರುತ್ತದೆ. ಶಾಸ್ತ್ರದಲ್ಲಿ ಹೇಳಲ್ಪಟ್ಟ ಚಂದ್ರಮಂಡಲವು ಸೂರ್ಯಮಂಡಲಕ್ಕಿಂತ ಬಹುಯೋಜನ ಎತ್ತರದಲ್ಲಿ ಇರುವುದೆಂದು, ಅದು ತೇಜೋಮಯವಾದದ್ದೆಂದು ತಿಳಿದುಬರುತ್ತದೆ. ಆದ್ದರಿಂದ ಅವೆರಡೂ ಪ್ರತ್ಯೇಕವಾದವುಗಳೆಂದೇ ತಿಳಿಯಬೇಕು.

ನಮ್ಮ ಶಾಸ್ತ್ರೀಯಮಾರ್ಗವು ಅಲ್ಪ ಆಯಾಸ, ಅಲ್ಪದ್ರವ್ಯವ್ಯಯ ಉಳ್ಳವುಗಳಾಗಿದ್ದರೂ ದೀರ್ಘಕಾಲದ ಸುಖಕ್ಕೆ ಕಾರಣವಾಗುವುದಲ್ಲದೇ ಯಾವ ತರಹದ ತೊಂದರೆಗೂ ಕಾರಣವಾಗುವುದಿಲ್ಲವಾದ್ದರಿಂದ ವಿವೇಕಿಗಳ ಕೃಷ್ಟಿಯಿಂದ ಆ ಶಾಸ್ತ್ರೀಯಮಾರ್ಗವೇ ವಿಶೇಷಸ್ವಿಕಾರಕ್ಕೆ ಅರ್ಹವಾಗುತ್ತದೆ. ಇದರ ಮೇಲೆ ನಮ್ಮ ಜನ್ಮಾಂತರಕರ್ಮಮೂಲವಾದ ಪ್ರಬಲ ರೋಗಗಳು, ಅನಿಷ್ಟಗಳು,

ಭೂತಪ್ರೇತಪಿಶಾಚಾದಿಗಳ ಬಾಧೆ ಇವುಗಳನ್ನು ಪರಿಹರಿಸಲು ವಿಜ್ಞಾನಶಾಸ್ತ್ರವು ಯಾವ ಸಹಾಯವನ್ನೂ ಮಾಡಲಾರದು. ಆದೇ ನ್ಮಮ ಉಪವೇದರೂಪವಾದ ವೈದ್ಯ, ಜ್ಯೋತಿಷ್ಯ ಮಂತ್ರಶಾಸ್ತ್ರ ಅಥರ್ವಣವಿದ್ಯೆಗಳನ್ನು ಆಶ್ರಯಿಸಿ ರೋಗಾದಿಗಳನ್ನು ಪರಿಹರಿಸಿಕೊಳ್ಳಬಹುದು. ಕಲಾವಿದ್ಯೆಗಳಿಂದಲೂ ವಿಶೇಷಸುಖ ಹೊಂದಬಹುದು. ಆದ್ದರಿಂದ ವೇದ, ಉಪವೇದ, ಕಲಾವಿದ್ಯೆಗಳಲ್ಲಿ ಮುಂದುವರೆದು ಈ ಲೋಕದಲ್ಲಿ ಹೆಚ್ಚಿಗೆ ಸುಖಪಡುವುದಲ್ಲದೇ ವೇದಾಂತವಿದ್ಯೆಯನ್ನು ಆಶ್ರಯಿಸಿ ಶಾಶ್ವತಸುಖ (ಮೋಕ್ಷ)ವನ್ನು ಹೊಂದುವ ಮಾರ್ಗವನ್ನು ಆಶ್ರಯಿಸುವುದೇ ಮಾನವನ ಮುಖ್ಯಕರ್ತವ್ಯವಾಗಿ ಕಾಣುತ್ತದೆ. ವಿದ್ಯುತ್‌ಶಕ್ತಿಯಿಂದ ನಾವು ಅನೇಕ ಉಪಯೋಗ ಹೊಂದುತ್ತಿದ್ದರೂ ಅದರ ಸಮೀಪದಲ್ಲಿರುವಾಗ ಎಚ್ಚರಿಕೆ ತಪ್ಪಿದರೆ ಅದು ಹೇಗೆ ಪ್ರಾಣಾಪಹಾರಿಯೋ ಹಾಗೇ ನಾವು ವಿಜ್ಞಾನಶಾಸ್ತ್ರದ ಉಪಯೋಗ ಹೊಂದುತ್ತಿದ್ದರೂ ಆದರಿಂದ ನಾವು ನಾಸ್ತಿಕವಾದಕ್ಕೆ ಗುರಿಯಾದರೆ ನಮ್ಮ ಇಹಪರ ಸುಖಕ್ಕೆ ಕಾರಣವಾದ ದೇವರ ಅನುಗ್ರಹವನ್ನು ಕಳೆದುಕೊಂಡು ಮಹಾದುಃಖಕ್ಕೆ ಗುರಿಯಾಗುವ ಸಂದರ್ಭ ಒದಗುವುದು. ವಿದ್ಯುತ್‌ಶಕ್ತಿಯು ಪ್ರಾಣಾಪಹಾರಿ ಎಂದರೆ ಸುಖಕ್ಕೆ ಕಾರಣಾವಾದ ನಮ್ಮ ಈ ಒಂದು ಶರೀರವನ್ನು ನಾಶಮಾಡುತ್ತದೆ. ಈ ನಾಸ್ತಿಕವಾದವು ಜನ್ಮಜನ್ಮಾಂತರ ದುಃಖಕ್ಕೂ ಶಾಶ್ವತ ದುಃಖಕ್ಕೂ ಕಾರಣವೆನಿಸುವುದು. ಲೋಕದಲ್ಲಿ ಸುಖ ಕಳೆದುಕೊಂಡವರು 'ನಾನು ಸತ್ತೆ ' ಎಂಬುದಾಗಿ ಹೇಳುತ್ತಿರುವುದನ್ನು ತಿಳಿದಾಗ, ನಾಸ್ತಿಕವಾದಕ್ಕೆ ಗುರಿಯಾಗುವವರು, 'ಮಹಾಮರಣ'ವನ್ನು ಹೊಂದಿದವರೆಂದರೆ ಉತ್ಪ್ರೇಕ್ಷೆಯಾಗಲಾರದಷ್ಟೇ.

ಈ ಕಾರಣದಿಂದ 'ಚಂದ್ರಮಂಡಲಕ್ಕೆ ಹೋಗಿ ಬಂದಿದ್ದೇವೆ' ಎಂದು ಹೇಳುವ ಸಂದರ್ಭದಲ್ಲಿ ಚೆನ್ನಾಗಿ ನಾಸ್ತಿಕವಾದಕ್ಕೆ ಅವಕಾಶ ಉಂಟಾದ್ದರಿಂದ ಅಮೃತಸದೃಶವಾದ ಶ್ರೀಮದ್ಭಾಗವತಕ್ಕೆ ವಿರೋಧ ಬಾರದಂತೆ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವ ಕ್ರಮವನ್ನು ಶಾಸ್ತ್ರ ತಿಳಿದ ವಿದ್ವಾಂಸರಿಂದ ತಿಳಿಯಬೇಕು. ಚಂದ್ರಮಂಡಲಕ್ಕೆ ಹೋಗಿಬಂದದ್ದನ್ನು ನಂಬುವಂತೆಯೇ ಆ ವಿಜ್ಞಾನಿಗಳೇ ಹೇಳುವಂತೆ ಭೂಮಿಯು ಕಿತ್ತಳೆ ಹಣ್ಣಿನ ಆಕಾರದಲ್ಲಿ ಇದೆ ಎಂದು ನಂಬಬೇಕಾಗುತ್ತದೆ. ಹಾಗೇ

ಮುಂದುವರೆದಾಗ ನಮ್ಮ ಭೂಗೋಳ, ಖಗೋಳವವೆಲ್ಲ ಸುಳ್ಳಾಗುವ ಸಂದರ್ಭಬಂದರೆ ಅದು ದೊಡ್ಡ ನಾಸ್ತಿಕವಾದವಾಗಲಾರದೇ !

## 6. ಸಾಮ್ಯವಾದ ನಿರಾಸ

ನಮಗೆ ಸುಖದ ಮಾರ್ಗವನ್ನು ತೋರಿಸಲು ಹೊರಟಿರುವ ವೇದ, ಶಾಸ್ತ್ರ ಪುರಾಣಾದಿಗಳನ್ನು ನೋಡಿದರೆ ನಮ್ಮಲ್ಲಿ ಉಚ್ಚ ನೀಚಭಾವ ಗಳಿಂದ ಕೂಡಿರುವ ಅನೇಕ ಜಾತಿಗಳು ಉಂಟೆಂದೂ, ಆಯಾ ಜಾತಿಗಳಿಗೆ ತಕ್ಕಂತೆ ಶಾಸ್ತ್ರದಲ್ಲಿ ಹೇಳಿರುವ ಕಾರ್ಯವನ್ನು ಮಾಡಿದಾಗ ದೇವರ ಅನುಗ್ರಹವಾಗುವುದೆಂದು ತಿಳಿದು ಬರುತ್ತಿದೆ. ಹೀಗಿರುವಾಗ ಸಾಮ್ಯವಾದಿಗಳು ''ಮನುಷ್ಯರಲ್ಲಿ ಹೀಗೆ ಉಚ್ಚನೀಚಭಾವವನ್ನು ತಿಳಿದರೆ ಕೆಲವರನ್ನು ನೋಡಬಾರದು, ಮುಟ್ಟಿಸಿಕೊಳ್ಳಬಾರದು ಎಂಬ ವಾದವು ಪ್ರಾರಂಭವಾಗುತ್ತದೆ. ಅದರಿಂದ ಕೆಲವರಿಗೆ ಅವಮಾನ ಮಾಡಿದಂತಾಗುವುದಿಲ್ಲವೇ ? ಹಾಗೆ ಪರರ ಹಿಂಸಾರೂಪವಾದ ಪಾಪಕೆಲಸವನ್ನು ಮಾಡುವುದಕ್ಕಿಂತ ಮನುಷ್ಯರಾದ ನಾವೆಲ್ಲರೂ ಸಮಾನರೆಂದು ತಿಳಿದು ವರ್ತಿಸಿದರೆ ಪರ ಹಿಂಸಾದಿಂದ ಬರುವ ಪಾಪವು ಬರದಂತಾಗಿ ಪರರಿಗೆ ಸಂತೋಷಪಡಿಸಿದ ಪುಣ್ಯವು ಒದಗಿ, ಉಚ್ಚನೀಚ ಭಾವವನ್ನು ತೊರೆದು ಎಲ್ಲರಿಗೂ ಒಂದು ತರಹ ಸುಖಜೀವನ ದೊರೆಯುವುದಿಲ್ಲವೇ '' ಎಂದು ಪ್ರಶ್ನಿಸುತ್ತಾರೆ.

ಉತ್ತರ : ಸಾಮ್ಯ ಭಾವನೆಯಿಂದ ಸುಖ ಬರುತ್ತದೆ ಎಂಬುವುದು ಒಂದು ಭ್ರಮದ ವಿಷಯವೇ ಸರಿ. ಪ್ರಪಂಚದಲ್ಲಿ ಎಲ್ಲರನ್ನೂ ಸಮಾನರನ್ನಾಗಿ ಮಾಡಲು ಬಯಸುವವರು ಮೊದಲು ತಮ್ಮನ್ನು ತಾವು ಸಮಾನರನ್ನಾಗಿ ಮಾಡಿಕೊಂಡು ನಂತರ ಮತ್ತೊಬ್ಬರನ್ನು ಸರಿಮಾಡುವುದು ವಿವೇಕಿಗಳ ಕೆಲಸವಷ್ಟೇ ? ! ಆದ್ದರಿಂದ ತಮ್ಮ ಮೂಗು, ಕಿವಿ ಮುಂದೆ ಚಾಚಿಕೊಂಡಿರುವುದನ್ನು ಕತ್ತರಿಸಿಕೊಂಡು, ಹಿಂದಕ್ಕೆ ಹೋಗಿರುವ ಕಣ್ಣುಗಳನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡಬೇಕಾಗುವುದು, ವಿಷಮಭಾವವು ತೊಂದರೆಯನ್ನುಂಟುಮಾಡುತ್ತದೆ ಎನ್ನುವುದು ಸರಿಯಲ್ಲ. ಏಕೆಂದರೆ ನಮ್ಮ ಶರೀರದಲ್ಲಿ ಕೈಬೆರಳುಗಳು ವಿಷಮ (ಹೆಚ್ಚು ಕಮ್ಮಿ) ಪರಿಮಾಣವಾಗಿರುವುದರಿಂದ ಆಗುತ್ತಿರುವ ಪ್ರಯೋಜನಗಳು ಎಲ್ಲಾ ಬೆರಳುಗಳು

ಸಮಾನವಾದಾಗ ದೊರೆಯಲಾರದಷ್ಟೇ ! ನಮ್ಮ ಶರೀರದಲ್ಲಿ ಪಾದ ನೀಚಾಯವವೆಂದು, ಶಿರಸ್ಸು ಉತ್ತಮ ಅವಯವವೆಂದು ವ್ಯವಹಾರ ಮಾಡುವುದು ತಪ್ಪೆಂದು. ಸಾಮ್ಯವಾದಿಗಳು ಹೇಳಬೇಕಾಗುತ್ತದೆ. ಹಾಗೆಯೇ ನಮ್ಮ ಶರೀರದಲ್ಲಿ ಸ್ಪರ್ಶಾಸ್ಪರ್ಶಕ್ಕೆ ಯೋಗ್ಯವಾದ ಅವಯವಗಳನ್ನು ಎಲ್ಲರೂ ಒಪ್ಪುತ್ತಿರುವಾಗ ಸಾಮ್ಯವಾದಿಗಳು ಅದನ್ನು ಅಳಿಸಲು ಹೊರಡಬೇಕಾಗುತ್ತದೆ. ವಿಜ್ಞಾನಶಾಸ್ತ್ರದವರು ಉಪಗ್ರಹಗಳಿಗೆ ಹೋಗಬೇಕೆಂಬ ಸಂದರ್ಭದಲ್ಲಿ ನಾಯಿ, ಕೋತಿಗಳನ್ನು ಮೊದಲು ಕಳುಹಿಸಿ, ಅಲ್ಲಿಯ ವಾತಾವರಣ ಪರೀಕ್ಷೆ ಮಾಡಿಕೊಂಡು ನಂತರ ಮನುಷ್ಯರು ಹೋಗುತ್ತಾರಷ್ಟೇ ? ಅದರಂತೆ ಮನುಷ್ಯರನ್ನು ಸಮಾನರನ್ನಾಗಿ ಮಾಡುವ ಮೊದಲು ವೃಕ್ಷಜಾತಿಗಳನ್ನು ಸಮಾನವನ್ನಾಗಿ ಮಾಡಿ ಈ ಪ್ರಯೋಗದಿಂದ (experiment ನಿಂದ) ಅದರ ಗುಣದೋಷಗಳನ್ನು ತಿಳಿದು ನಂತರ ಮನುಷ್ಯರನ್ನು ಸಮಾನರನ್ನಾಗಿ ಮಾಡಲುಯತ್ನಿಸುವುದು ವಿವೇಕಿಗಳ ಕಾರ್ಯವಾಗುವುದಿಲ್ಲವೆ ? ತಗ್ಗಾದ ಭೂಮಿಯನ್ನೂ ಎತ್ತರವಾದ ಬೆಟ್ಟವನ್ನು ಸಮವಾಗಿ ಮಾಡಲು ಹೊರಟರೆ ಮಳೆಯನ್ನೂ ಜಲಸಂಗ್ರಹವನ್ನೂ ಕಳೆದುಕೊಳ್ಳಬೇಕಾಗುವುದು ಎಂಬುದನ್ನು ಮರೆಯಬಾರದು. ಹಾಗೆಯೇ ಎಷ್ಟೇ ಪ್ರಯತ್ನಪಟ್ಟರೂ, ಉತ್ತಮ ಗುಣಗಳಿಂದಲೂ, ನೀಚಗುಣಗಳಿಂದಲೂ ಕೂಡಿರುವವರನ್ನು , ಬುದ್ಧಿವಂತರನ್ನು-ಬುದ್ಧಿಹೀನರನ್ನು, ಬಲಿಷ್ಠರನ್ನು -ಬಲಹೀನರನ್ನು , ಹೀಗೆವಿರುದ್ಧಗುಣಗಳಿಂದ ಕೂಡಿರುವವರನ್ನು ಸಮಾನರನ್ನಾಗಿ ಮಾಡುವುದು ಸಾಧ್ಯವಿಲ್ಲ. ದೇವರು ಇಟ್ಟಿರುವ ವಿಷಮಸ್ಥಿತಿಯಿಂದ ಏನು ಅನುಕೂಲವಾಗುತ್ತದೆ ಎಂಬುದಕ್ಕೆ ಒಂದು ದೃಷ್ಟಾಂತವನ್ನು ಕೊಡುತ್ತೇವೆ. ಒಬ್ಬ ಮನುಷ್ಯನು ಧನಿಕನು, ಮತ್ತೊಬ್ಬನು ಬಡವನಾಗಿರುವಾಗ ಧನಿಕನು ತನ್ನ ರಕ್ಷಣೆಗಾಗಿ ಬಡವನಿಗೆ ಸಂಬಳ ಕೊಟ್ಟು ಇಟ್ಟುಕೊಳ್ಳುವ ಸ್ಥಿತಿಯು, ಬಡವನ್ನು ತನ್ನ ಜೀವನಕ್ಕಾಗಿ ಧನಿನಕನನ್ನು ಆಶ್ರಯಿಸುವ ಸ್ಥಿತಿಯು ಬರುತ್ತದೆ, ಹೀಗೆ ಪರಸ್ಪರ ಆಶ್ರಯವಿರುವುದರಿಂದ ಪರಸ್ಪರ ಪ್ರೇಮವು ಸುಸ್ಥಿರವಾಗಿರುವ ಸಂದರ್ಭ ಬರುತ್ತದೆ. ಇದರ ಬದಲು, ಒಂದು ವೇಳೆ ಕಾರಣವಿರುವುದಿಲ್ಲ, ಬೇರೆ ಎಲ್ಲಾ ಗುಣದಲ್ಲೂ ಸಾಮ್ಯಸಂಪಾದನೆ ಮಾಡುವುದು ಅಶಕ್ಯವಾದ ಪ್ರಯುಕ್ತ ಕಲಹಕ್ಕೆ ಅವಕಾಶ ಇದ್ದೇ

ಇರುವುದು. ಮತ್ತು 'might is right'ಎಂಬಂತೆ ಪ್ರಬಲರು ದುರ್ಬಲರನ್ನು ಬಾಧಿಸುವದಕ್ಕೆ ಅವಕಾಶ ದೊರಕುವುದರಿಂದ ಜನಗಳಲ್ಲಿ ಶಾಂತಿಯು ನಷ್ಟವಾಗುವುದು. ಅದೇ ವಿಷಮಸ್ಥಿತಿಯಿದ್ದರೆ ಶಾಂತಿ ದೊರಕಿ ಪರಸ್ಪರ ಪ್ರೇಮದಿಂದ ಇದ್ದು ಸುಖವಾಗಿರಬಹುದು. ಮಾನವರಲ್ಲಿ ಸಾಮ್ಯವನ್ನು ಬಯಸುವವರು ಬರೀ ಗಂಡಸರೇ ಅಥವಾ ಬರೀ ಹೆಂಗಸರೇ ಇದ್ದರೆ ಸುಖವಾಗುವದೋ ಅಥವಾ ಎರಡೂ ಪಂಗಡದವರು ಇದ್ದರೆ ಸುಖವಾಗುವುದೋ ಎಂಬದನ್ನು ಗಮನಿಸಬೇಕು. ಅಂದರೆ ದೈವಸೃಷ್ಟಿಯಲ್ಲಿರುವ ವಿಷಮ ಸ್ಥಿತಗಳೇ ಸುಖಕ್ಕೆ ಕಾರಣವೆಂದು, ಸಾಮ್ಯಸ್ಥಿತಿಯು ಸುಖಕ್ಕೆ ಕಾರಣವಲ್ಲವೆಂದು ತಿಳಿಯಬಹುದಾಗಿದೆ.

ಮನುಷ್ಯರಲ್ಲಿ ಊಹಿಸುವ ಸಾಮ್ಯವು ಸುಖಕ್ಕೆ ಕಾರಣವಾಗುವ ಪಕ್ಷದಲ್ಲಿ ಸರ್ವಜ್ಞನಾದ ಆ ದೇವರು ಎಲ್ಲರನ್ನೂ ಸಮಾನರನ್ನಾಗಿ ಏಕೆ ಸೃಷ್ಟಿ ಮಾಡಲಿಲ್ಲ?

ರಷ್ಯಾದಲ್ಲಿ ಸಾಮ್ಯವಾದವಿದ್ದಾಗ, ಅಲ್ಲಿಯ ಮುಖ್ಯ ಅಧಿಕಾರಿಗಳು ಹೇಳಿದಂತೆ ಇತರರು ಕೇಳಬೇಕಾಗಿತ್ತೇ ವಿನಹ ಇತರ ಸಾಮಾನ್ಯಜನ ಹೇಳಿದಂತೆ ಮುಖ್ಯ ಅಧಿಕಾರಿ ಎಂದೂ ಕೇಳುತ್ತಿರಲಿಲ್ಲ. ಹೀಗಿರುವಾಗ ಸಾಮ್ಯವಾದ ಬಾಯಲ್ಲಿ ಹೇಳಿದರೂ ಆಚರಣೆಯಲ್ಲಿ ಕಂಡುಬರುವುದಿಲ್ಲವಷ್ಟೇ! ‘‘ಸಾಮ್ಯ’’ ಎಂಬ ಮಾತಿಗೇ ಸಂತೋಷಪಡುವವರು ‘‘ಅಮೃತ’’ವೆಂಬ ಮಾತಿಗೆ ಸಂತೋಷಪಟ್ಟು ‘‘ವಿಷ’’ ವನ್ನೇ ಕುಡಿಯುವವರಂತೆ ಆಗುವರು.

॥ ಶ್ರೀದೇವೇಂದ್ರತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ

ಶ್ರೀಮಧ್ವೇಶಾರ್ಪಣಮಸ್ತು ॥